ಅಧ್ಯಕ್ಷರು :— ವಿಧೇಯಕವನ್ನು ಮಂಡಿಸಲಾಗಿದೆ. - **ಅನುಬಂಧ - ೨**

ಅ) ವಿಧೇಯಕವನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು

ಕರ್ನಾಟಕ ಮಾರಾಟ ತೆರಿಗೆ ಮತ್ತು ಅಬಕಾರಿ ಕಾನೂನುಗಳ (ತಿದ್ದುಪಡಿ) ವಿಧೇಯಕ, 2000 ಪರ್ಯಾಲೋಚನಾ ಪ್ರಸ್ತಾವ

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿ) :— ಮಾನ್ಯ ಅಧ್ಯಕ್ಷರೆ, 2000ದ ಕರ್ನಾಟಕ ಮಾರಾಟ ತೆರಿಗೆ ಮತ್ತು ಅಬಕಾರಿ ಕಾನೂನುಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವ ಮಂಡಿಸಲಾಯಿತು

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿ) :— ಮಾನ್ಯ ಅಧ್ಯಕ್ಷರೆ, ಸದರಿ ವಿಧೇಯಕದ ಮುಖ್ಯ ಉದ್ದೇಶವೇನೆಂದರೆ, ನಮ್ಮ ನಿಯಮಗಳನ್ನು ಆದಷ್ಟು ಸರಳೀಕರಣಗೊಳಿಸಬೇಕು ಮತ್ತು Increased compliance in the collection of Excise Duty and Sales Tax on IML, rectified spirit, beer, fenny, wine through one agency. ಇದುವರೆಗೂ ಪದ್ಧತಿ ಏನಿತ್ತು ಎಂದರೆ, ಕಳೆದ ಹಲವಾರು ವರ್ಷಗಳಿಂದ ನಮ್ಮ ಇಂಡಿಯನ್ ಮೇಡ್ ಲಿಕ್ಕರ್, ರೆಕ್ಟಿಫೈಡ್ ಸ್ಪಿರಿಟ್, ಬೀರ್ ಮುಂತಾದ ಪದಾರ್ಥಗಳ ಮೇಲೆ ಎರಡು ರೀತಿಯ ಕಡಿವಾಣಗಳಿದ್ದವು, ಮೊದಲನೆಯದು, ಎಕ್ಸೈಸ್ ಇಲಾಖೆ ಅದನ್ನು ನಿಯಂತ್ರಣ ಮಾಡಲು ಪ್ರಯತ್ನಿಸುತ್ತದೆ, ಎರಡನೆಯದು, ಕಮರ್ಷಿಯಲ್ ಟ್ಯಾಕ್ಸ್ ಡಿಪಾರ್ಟ್‌ಮೆಂಟ್ ಕಡಿವಾಣ ಹಾಕುತ್ತದೆ. ಈ ಪದಾರ್ಥಗಳನ್ನು ತಯಾರಿಸುವ ಸಂಸ್ಥೆಗಳನ್ನು ನಡೆಸುತ್ತಿರುವವರು ಕಳೆದ ಮೂರ್ನಾಲ್ಕು ವರ್ಷಗಳಿಂದಲೂ ಈ ವಿಚಾರದಲ್ಲಿ ಹಿಂದಿನ ಸರ್ಕಾರವನ್ನು ಕೂಡ ಅಪ್ರೋಚ್ ಮಾಡಿದ್ದರು. 'ಏನೆಂದರೆ, ನಿಯಮಗಳನ್ನು ಸರಳೀಕರಣಗೊಳಿಸಿ ಎಕ್ಸೈಸ್ ಡಿಪಾರ್ಟ್‌ಮೆಂಟ್‌ಗೆ ಸಂಪೂರ್ಣ ಅಧಿಕಾರ ಕೊಡಬೇಕು. ಈಗಾಗಲೇ ಇದು ಮಹಾರಾಷ್ಟ್ರ ರಾಜ್ಯದಲ್ಲಿ ಜಾರಿಯಲ್ಲಿದ್ದು, ಮಹಾರಾಷ್ಟ್ರದಲ್ಲಿ ಇದು ಸಾಧ್ಯವಾಗಬಹುದಾದರೆ, ನಮ್ಮ ರಾಜ್ಯದಲ್ಲೂ ಕೂಡ ಸರಳೀಕರಣ ಮಾಡುವುದರ ಮೂಲಕ ನಮಗಾಗುತ್ತಿರುವ ಕಿರುಕುಳಗಳಿಂದ ನಮ್ಮನ್ನು ಪಾರು ಮಾಡಬೇಕು' ಎಂದು ಕೇಳಿದ್ದಕ್ಕೆ ನಾನು ಅದಕ್ಕಾಗಿ ಒಂದು ಷರತ್ತು ವಿಧಿಸಿದ್ದೇನೆ. ಏನೆಂದರೆ, 'ನಾವು ಇವೆರಡನ್ನೂ ಜೋಡಿಸುವಂಥ ಕೆಲಸ ಮಾಡಬೇಕಾಗಿದ್ದರೆ, ವರ್ಷವೊಂದಕ್ಕೆ ನೀವು ಶೇಕಡ 20ರಷ್ಟು ಜಾಸ್ತಿ ವರಮಾನವನ್ನು ನಮಗೆ ಕೊಡುವುದಕ್ಕೆ ಸಿದ್ಧರಾಗಿರಬೇಕು. ಹಾಗೆ ನೀವು ಮಾಡುವುದಾದರೆ ಆರು ತಿಂಗಳ ಮಟ್ಟಿಗೆ ಒಂದು ರೀತಿಯ ಎಕ್ಸ್‌ಪೆರಿಮೆಂಟಲ್ ಬೇಸಿಸ್ ಮೇಲೆ ನೀವು ಸರಳೀಕರಣಕ್ಕೆ ಒಪ್ಪುತ್ತೇವೆ' ಎಂದು ಹೇಳಿದಾಗ, ಅವರೆಲ್ಲರೂ ಕೂಡ ಕನಿಷ್ಠ ಶೇಕಡ 20ರಷ್ಟು ಜಾಸ್ತಿ

ವರಮಾನ ಕೊಡುವುದಕ್ಕೆ ಒಪ್ಪಿಗೆಯಿತ್ತಿದ್ದಾರೆ. ಆದುದರಿಂದ, ನಮ್ಮ ರಾಜ್ಯಕ್ಕೆ ಎಕ್ಸೈಸ್‌ನಿಂದ ಹೆಚ್ಚು ಆದಾಯ ಬರುವ ಅವಕಾಶಗಳಿದ್ದರೆ ಅದು ಸಾಧ್ಯವಾಗುವುದಾದರೆ ಆ ಪ್ರಯತ್ನಕ್ಕೆ ನಾವೇಕೆ ಹೋಗಬಾರದೆಂಬ ದೃಷ್ಟಿಯಿಂದ ಈ ವಿಧೇಯಕವನ್ನು ನಾನು ಸಭೆಯ ಮುಂದಿಡುತ್ತಿದ್ದೇನೆ. ಸಭೆಯ ಈ ವಿಧೇಯಕಕ್ಕೆ ದಯವಿಟ್ಟು ಒಪ್ಪಿಗೆ ನೀಡಬೇಕೆಂದು ಕೋರುತ್ತೇನೆ.

+ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು) :— ಮಾನ್ಯ ಅಧ್ಯಕ್ಷರೆ, ಕರ್ನಾಟಕ ಮಾರಾಟ ತೆರಿಗೆ ಮತ್ತು ಅಬಕಾರಿ ತೆರಿಗೆ ಕಾನೂನುಗಳ ತಿದ್ದುಪಡಿ ವಿಧೇಯಕವನ್ನು ಮಾನ್ಯ ಮುಖ್ಯಮಂತ್ರಿಗಳು ಮಂಡಿಸಿದ್ದಾರೆ. ಇಲ್ಲಿ ಮುಖ್ಯವಾಗಿ ಈ ಎರಡು ಮಾರಾಟ ತೆರಿಗೆ ಮತ್ತು ಅಬಕಾರಿ ತೆರಿಗೆ ಇದು ಎರಡೂ ಸೇರಿಸುವ ಅಗತ್ಯತೆ ಬಗ್ಗೆ ಸರಳೀಕೃತ ಆಗುತ್ತದೆ ಎನ್ನುವುದ ಮತ್ತು ಹೆಚ್ಚು ರೆಕವರಿ ಆಗುತ್ತದೆ ಎಂದು ಮೂಲ ಉದ್ದೇಶ ಇದೆ ಎಂದು ಹೇಳಿದರು. ಆದರೆ ಇಲ್ಲಿಯವರೆಗೆ ಅಬಕಾರಿಯಿಂದ ಕೋಟ್ಯಾಂತರ ರೂಪಾಯಿ ಇನ್ನೂ ರಿಕವರಿ ಆಗಿಲ್ಲ. ಆ ಎಫಿಶಿಯನ್ಸಿ ಅವರ ಕಡೆ ಕಾಣುತ್ತಿಲ್ಲವೆಂದು ಅನ್ನಿಸುತ್ತಿದೆ. ಇದರಿಂದ ಎಷ್ಟು ಅಡ್ವಾಂಟೇಜ್ ಆಗಬಹುದು ಎಂದು ಪ್ರಶ್ನೆ ಇದೆ. ಕೆಲವೊಮ್ಮೆ ಮಾರಾಟ ತೆರಿಗೆಯಿಂದ ತೊಂದರೆಯಾಗುತ್ತದೆ ಎಂದು ಕಂಪ್ಲೈಂಟ್ ಇದೆ. ಅಬಕಾರಿ ಇಲಾಖೆಯಿಂದ ಅದನ್ನು ವಸೂಲು ಮಾಡುವುದಾದರೆ ಇಲ್ಲಿಯವರೆಗೆ ಎಷ್ಟು ಪ್ರಕರಣಗಳಲ್ಲಿ ಕೋಟ್ಯಾಂತರ ರೂಪಾಯಿ ಬಾಕಿ ಇರುವುದನ್ನು ನಾವು ನೋಡಿದ್ದೇವೆ. ಕೆಲವೊಂದು ಪ್ರಸಂಗಗಳಲ್ಲಿ ಬಾಕಿ ಹಣ ಏನಿದೆ ಅದರ ಮೇಲೆ ಬಡ್ಡಿ ಮನ್ನಾ ಮಾಡುವ ಯೋಜನೆ ಸರ್ಕಾರ ಮಾಡುತ್ತಿದೆ. ಆದಕ್ಕಾಗಿ ಎಷ್ಟು ಎಫೆಕ್ಟೀವ್ ಆಗುತ್ತದೆ ಎಂದು ನಾವು ಯೋಚನೆ ಮಾಡಬೇಕಾಗುತ್ತದೆ. ಮಹಾರಾಷ್ಟ್ರದಲ್ಲಿ ಸಕ್ಸಸ್ ಆಗಿದ್ದರೆ ಆಡ್ಡಿ ಇಲ್ಲ. ಆದರೆ ಕರ್ನಾಟಕದಲ್ಲಿ ಎಷ್ಟು ಸಕ್ಸಸ್ ಆಗುತ್ತದೆ ಎಂದು ಪರಾಮರ್ಶೆ ಮಾಡಬೇಕಾಗುತ್ತದೆ. 2000 -2001ರ ಬಜೆಟ್‌ನಲ್ಲಿ ತೆಗೆದುಕೊಳ್ಳಬಹುದಾಗಿತ್ತು ಅಷ್ಟು ಆತುರ ಏನಿತ್ತು ಎಂಬ ಪ್ರಶ್ನೆ ಬರುತ್ತದೆ. ಮಾನ್ಯ ಮುಖ್ಯ ಮಂತ್ರಿಗಳು ಹೇಳಿದರು ಈ ಎಕ್ಸೈಸ್‌ನಿಂದ 20 ಪರ್ಸೆಂಟ್ ವರಮಾನ ಜಾಸ್ತಿ ಕೊಡಬಹುದು ಎಂದ ಹೇಳಿದರು. ಇದನ್ನು ನಾವು ಅನುಕೂಲ ಮಾಡಿಕೊಡುತ್ತೇವೆ, 20 ಪರ್ಸೆಂಟ್ ಅನುದಾನ ಜಾಸ್ತಿ ಮಾಡಿ. ಕರ್ನಾಟಕದಲ್ಲಿ ಪರಿಸ್ಥಿತಿ ಏನಾಗಿದೆ ಎಂದರೆ ಲೈಸನ್ಸ್ ಹೋಲ್ಡರ್ಸ್ ಯಾರಿದ್ದಾರೆ ಸರ್ಕಾರದ ಪರ್ಮಿಷನ್‌ನಿಂದ ನಡೆಸುತ್ತಿದ್ದಾರೆ; ಬಾರ್ ಇರಬಹುದು, ಲಿಕ್ಕರ್ ಬಿಸ್‌ನೆಸ್ ಇರಬಹುದು, ಯಾರು ಕಾನೂನುಬದ್ಧವಾಗಿ ನಡೆಸುತ್ತಿದ್ದಾರೆ ಅವರಿಗೆ ಬರ್ಡನ್ ಆಗುವದನ್ನು ನಾವು ನೋಡಿದ್ದೇವೆ. ಇಲ್ಲಿಸಿಟ್ ಆಥವಾ ಬೇರೆ ಅನಧಿಕೃತ ಬಾರ್, ಅನಧಿಕೃತವಾದ ರೆಸ್ಟೋರೆಂಟ್, ಲಿಕ್ಕರ್ ಮಾಡಿರುವುದು ಇದರಿಂದ ಕೋಟ್ಯಾಂತರ ರೂಪಾಯಿ ಸರ್ಕಾರಕ್ಕೆ ಲುಕ್ಸಾನು ಆಗುತ್ತಿದೆ. ಹುಬ್ಬಳ್ಳಿಯಲ್ಲಿ ತಾವು ನೋಡಿದರೆ ಗೊತ್ತಾಗುತ್ತದೆ. ಲೈಸನ್ಸ್ ಬಾರ್ 90 ರಿಂದ 91 ಇದ್ದರೆ, ಅನ್‌ಲೈಸನ್ಡ್ ಬಾರ್, ರೆಸ್ಟೋರೆಂಟ್ ಮತ್ತು ಡಿಪೋಗಳು ಬೇಕಾದಷ್ಟು ಇವೆ. ಆದರಿಂದ

ಕೋಟ್ಯಾಂತರ ರೂಪಾಯಿ ವರಮಾನ ಹೊರಗಡೆ ಹೋಗುತ್ತಿದೆ. ಅದನ್ನು ಕಟ್ಟುನಿಟ್ಟಿನಿಂದ ಬಂದ್ ಮಾಡುವುದಕ್ಕೆ ಏನು ಕ್ರಮ ತೆಗೆದುಕೊಂಡಿದ್ದೀರಿ. ಹಿಂದಿನ ವರ್ಷವೂ ಹೇಳಿದ್ದೇವೆ, ಈಗಲೂ ಹೇಳುತ್ತಿದ್ದೇವೆ ಇದರ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ. ಸೆಕೆಂಡ್ಸ್, ಥರ್ಡ್ಸ್ ಇರಬಹುದು, ಇದು ಇಲ್ಲಿಸಿಟ್ ಲಿಕ್ಕರ್ ಮಾಡಿರುವುದು ಬಹಳ ಡೇಂಜರ್. ಒಳ್ಳೊಳ್ಳೆಯ ಕಂಪನಿಗಳ ಲೇಬಲ್ ಹಾಕಿಕೊಂಡು ತಾವೇ ತಯಾರು ಮಾಡಿದ ಮದ್ಯ ವಿಸ್ಕಿ ಇರಬಹುದು, ಫಾರಿನ್ ಲಿಕ್ಕರ್ ಇರಬಹುದು, ಲೇಬಲ್ ತಯಾರುಮಾಡಿ ಬಾಟಲ್‌ಗಳನ್ನು ತಯಾರು ಮಾಡಿ ಅಷ್ಟೇ ಅಚ್ಚುಕಟ್ಟಾಗಿ ಮಾಡತಕ್ಕದ್ದು ಪ್ರಮುಖ ನಗರಗಳಲ್ಲಿ ನಡೆಯುತ್ತಿದೆ. ಇದರ ಬಗ್ಗೆ ಬಂದೋಬಸ್ತ್ ಮಾಡುವುದು ಆಗಬೇಕಾಗಿದೆ. ಅದನ್ನು ಬಂದೋಬಸ್ತ್ ಮಾಡಿ ನಮ್ಮ ಎಕ್ಸೈಸ್ ಮಿನಿಸ್ಟರ್ ಪತ್ರಿಕೆಯಲ್ಲಿ ಒಂದು ಸ್ಟೇಟ್‌ಮೆಂಟ್ ಕೊಟ್ಟಿದ್ದರು. ಈ ವರ್ಷ 12 ನೂರು ಕೋಟಿ ರೂಪಾಯಿ ಮಾರಾಟ ತೆರಿಗೆ ಮತ್ತು 15 ನೂರು ಕೋಟಿ ರೂಪಾಯಿ ವರಮಾನ ಎಕ್ಸೈಸ್‌ನಿಂದ ತೆಗೆದುಕೊಂಡು ಬರುತ್ತೇವೆಂದು ಹೇಳಿದ್ದರು. ಇದನ್ನು ಮಾಡಿ ಇಲ್ಲಿಸಿಟ್ ಇತ್ಯಾದಿಯಾಗಿ ಏನು ನಡೆಯುತ್ತಿದೆ ಅದನ್ನು ಬಂದ್ ಮಾಡಿದರೆ ಇನ್ನೂ ಸಾವಿರಾರು ಕೋಟಿ ರೂಪಾಯಿ ಇನ್‌ಕಮ್ ಸರ್ಕಾರಕ್ಕೆ ಬರುತ್ತದೆ. ಅದರ ಬಗ್ಗೆ ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳುವುದು ಆಗಬೇಕು. ನಾನು ಕಣ್ಣಾರೆ ಕೆಲವು ನಗರಗಳಲ್ಲಿ ನೋಡುತ್ತಿದ್ದೇನೆ.

ಶ್ರೀ ಡಿ.ಬಿ. ಇನಾಂದಾರ್ :— ಮಾನ್ಯ ಅಧ್ಯಕ್ಷರೆ, ಹುಬ್ಬಳ್ಳಿ ನಗರದಲ್ಲಿ ಆವರ ಓಟರ್ಸ್ ಬಹಳ ಜನ ಇದ್ದಾರೆ.

ಶ್ರೀ ಜಗದೀಶ್ ಶೆಟ್ಟರ್ :— ಇದು ರಾಂಗ್ ಸಿಗ್ನಲ್ ಆಗಿ ಹೋಗುತ್ತದೆ. ಓಟರ್ಸ್ ಇದ್ದಾರೆ ಎಂದು ಹೇಳಬೇಡಿ. ಅದನ್ನು ಮಾಡುವ ಲಿಮಿಟೆಡ್ ಜನ ಇರುತ್ತಾರೆ. ಅವರು ಎಲ್ಲರಿಗೂ ಇನ್‌ವೆಸ್ಟ್ ಮಾಡುತ್ತಾರೆ. ನಮ್ಮ ಓಟರ್ಸ್ ನಿಮ್ಮ ಓಟರ್ಸ್ ಎಂದು ಕೆಟಗರಿ ಮಾಡುವುದಕ್ಕೆ ಹೋಗಬೇಡಿ. ಇದು ಕೇವಲ ಹುಬ್ಬಳ್ಳಿ ನಗರದಲ್ಲಿ ಅಲ್ಲ, ಇಡೀ ನಮ್ಮ ಗುಲ್ಬರ್ಗ, ರಾಯಚೂರು ಮತ್ತು ಬೆಂಗಳೂರು ಎಲ್ಲ ಕಡೆಯೂ ಇಲ್ಲಿಸಿಟ್ ನಡೆಯುತ್ತಿದೆ. ಕೆಲವು ಡಿಪೋಗಳು ಚಹಾದ ಅಂಗಡಿ ತರಹ ಆಗಿವೆ.

ಶ್ರೀ ಚಂದ್ರಕಾಂತ ಬೆಲ್ಲದ್ :— ಚಹಾದ ಅಂಗಡಿ ಕಡಿಮೆ ಆಗಿವೆ. ಈ ಅಂಗಡಿಗಳೇ ಜಾಸ್ತಿ ಆಗಿವೆ. ಅಂತಹ ಪರಿಸ್ಥಿತಿ ಬಂದಿದೆ.

ಶ್ರೀ ಜಗದೀಶ್ ಶೆಟ್ಟರ್ :— ಇದರಿಂದ ಸಾಕಷ್ಟು ವರಮಾನ ಬರುವುದಕ್ಕೆ ಸಾಧ್ಯ ಇದೆ. ಒಂದು ಕಡೆ ಎಕ್ಸೈಸ್ ಡಿಪಾರ್ಟ್‌ಮೆಂಟ್‌ನಿಂದ ಒಂದು ಸರ್ಕ್ಯುಲರ್ ಬಂದಿತ್ತು. ಎಲ್ಲ ಬಾರ್ ಲೈಸನ್ಸ್ ಇರುವವರಿಗೆ ಈ ವರ್ಷ 20 ಪರ್ಸೆಂಟ್‌ನಿಂದ 25 ಪರ್ಸೆಂಟ್ ಕನ್ಸಮ್ಷನ್ ಜಾಸ್ತಿ ಮಾಡಿ. ಕನ್ಸಮ್ಷನ್ ಜಾಸ್ತಿ ಮಾಡಿದರೆ ಇನ್‌ಕಮ್ ಜಾಸ್ತಿಯಾಗುತ್ತದೆ ಎಂದು ಸರ್ಕ್ಯುಲರ್ ಬರುತ್ತದೆ. ಈ ರೀತಿ ಸರ್ಕ್ಯುಲರ್ ಇಶ್ಯೂ ಮಾಡಿದರೆ ಸರ್ಕ್ಯೂಲರ್

ಮೀನಿಂಗ್ ಏನಾಗುತ್ತದೆ. ಈ ಹ್ಯಾಬಿಟ್ ಜನರಲ್ಲಿ ಜಾಸ್ತಿ ಮಾಡಿ ಎಂದು ಎನ್‌ಕರೇಜ್ ಕೊಟ್ಟ ಹಾಗಾಗುತ್ತದೆ. ಅದರ ಬದಲು ಇಲ್ಲಿಸಿಟ್ ಬಾರುಗಳು ಏನಿವೆ ಅವನ್ನು ಬಂದ್ ಮಾಡಿದರೆ ಸಾಕಷ್ಟು ಇನ್‌ಕಮ್ ಸರ್ಕಾರಕ್ಕೆ ಬರುತ್ತದೆ. ಆ ದಿಸೆಯಲ್ಲಿ ಪ್ರಯತ್ನ ಮಾಡಿ. ಇದು ಮಹಾರಾಷ್ಟ್ರದಲ್ಲಿ ಏನು ಸಕ್ಸಸ್ ಆಗಿದೆ ಅದನ್ನು ನೋಡಿಕೊಂಡು ಇದರಲ್ಲಿ ಏನು ಲೂಪ್‌ಹೋಲ್ಸ್ ಇವೆ, ಅದರಿಂದ ಅಡ್ವಾಂಟೇಜ್ ಆಗುವುದಾದರೆ ಮಾಡುವುದಕ್ಕೆ ಅಡ್ಡಿ ಇಲ್ಲ. ಅದರಿಂದ ಡಿಸ್ ಅಡ್ವಾಂಟೇಜ್ ಆಗುವುದಾದರೆ, ಕೆಲವು ಸಂಶಯ ಬಂದರೆ ಅದರ ಬಗ್ಗೆ ಪುನರ್ ವಿಮರ್ಶ ಮಾಡಿ ಎಂದು ತಿಳಿಸುತ್ತೇನೆ.

+ ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ) :— ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಹಣಕಾಸು ಸಚಿವರಾಗಿ ಈ ವಿಧೇಯಕವನ್ನು ಸದನದ ಮುಂದೆ ಏನು ಮಂಡಿಸಿದ್ದಾರೆ ಇದನ್ನು ನಾವು ವಿರೋಧ ಮಾಡುವುದಿಲ್ಲ. ಪ್ರಾಯೋಗಿಕವಾಗಿ ಸೇಲ್ಸ್ ಟ್ಯಾಕ್ಸ್ ಮತ್ತು ಎಕ್ಸೈಸ್ ಡ್ಯೂಟಿ ಮರ್ಜ್ ಮಾಡುವುದು ಇದರ ಉದ್ದೇಶವಾಗಿದೆ. ನಮ್ಮ ಸರ್ಕಾರ ಇದ್ದಾಗ ಕೂಡ ಅಸೋಸಿಯೋಷನ್‌ನವರು ಒಂದು ರೆಪ್ರಸೆಂಟೇಷನ್ ಕೊಟ್ಟಿದ್ದರು. ನಾವು ಅದನ್ನು ಮಾಡಬೇಕೆಂದು ಒಂದು ಇನ್‌ಟೆನ್‌ಷನ್ ಇಟ್ಟುಕೊಂಡಿದ್ದೆವು. ಆದರೆ ಅಷ್ಟು ಹೊತ್ತಿಗೆ ಚುನಾವಣೆ ಬಂತು, ಮಾಡುವುದಕ್ಕಾಗಲಿಲ್ಲ. ಎಕ್ಸ್‌ಪೆರಿಮೆಂಟಲ್ ಬೇಸಿಸ್ ಮೇಲೆ ಆರು ತಿಂಗಳು ಇದನ್ನು ಮಾಡಿ ನೋಡಿ ನಾವು ಇದನ್ನು ವಿರೋಧ ಮಾಡುವುದಿಲ್ಲ. ಮತ್ತೊಂದು ಇದಕ್ಕೆ ಸಂಬಂಧ ಇಲ್ಲದೆ ಇರುವ ವಿಚಾರವನ್ನು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರಬಯಸುತ್ತೇನೆ. ಈ ಸಾರಿ ತಾವು ಏನು ಸಿಎಲ್ I ಮತ್ತು ಸಿಎಲ್ I ಟ್ಯಾಕ್ಸ್ ಏನು ಜಾಸ್ತಿ ಮಾಡಿದ್ದೀರಿ ಅದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಬಾರ್‌ಗಳ ಲೈಸನ್ಸ್‌ನ್ನು ಬಹಳ ಜನ ಸರೆಂಡರ್ ಮಾಡುತ್ತಿದ್ದಾರೆ. ಬಾರ್ ಲೈಸನ್ಸ್ ಸರೆಂಡರ್ ಮಾಡಿ ಲಿಕ್ಕರ್ ಸರ್ವ್ ಮಾಡುವುದು ನಿಲ್ಲಿಸಿಲ್ಲ. ಅದು ನಡೆದುಕೊಂಡು ಹೋಗುತ್ತಿದೆ. ಯಾರ ಕೈಯಲ್ಲೂ ಕೂಡ ಇದು ಸಂಪೂರ್ಣವಾಗಿ 100 ಪರ್ಸೆಂಟ್ ಒಂದು ಸಿಸ್ಟಮ್ ತರುವುದು ಅದರಲ್ಲೂ ಈ ಇಲಾಖೆಯಲ್ಲಿ ಕಷ್ಟವೆಂದು ನಾನು ಒಪ್ಪುತ್ತೇನೆ. ಆದ್ದರಿಂದ ಆ ಫೀಸ್‌ಗಳನ್ನು, ನೀವು ಏನು ಹಾಕಿದ್ದೀರಿ, ಪರ್ಟಿಕ್ಯೂಲರ್‌ಲಿ ಸಿಎಲ್ (I) ಬಾರ್‌ಗಳವರು ಬಹಳ ಕಷ್ಟದಲ್ಲಿದ್ದಾರೆ. ಅನೇಕರು ಲೈಸನಸ್ ಸರೆಂಡರ್ ಮಾಡಿರುವ ಅಂಕಿ ಅಂಶಗಳನ್ನು ತಾವು ಸದನ ಮುಗಿದ ನಂತರ ಪರಿಶೀಲನೆ ಮಾಡಬಹುದು. ಸಿಎಲ್ (II) ಶಾಪ್‌ಗಳು ಕೂಡ ತಾವು ಹಾಕಿರುವ ಫೀಸ್‌ನಿಂದ ಸೆಕೆಂಡ್ಸ್ ಜಾಸ್ತಿಯಾಗುತ್ತಿದೆ. ಏನಾಗುತ್ತದೆ ಎಂದರೆ, ಅವರು ಯಾವಾಗ ಡ್ಯೂಟಿ ಕಟ್ಟಿ, ಸರ್ಕಾರಕ್ಕೆ ಹಣ ಕಟ್ಟಿ, ಫೀಸನ್ನು ಕೊಟ್ಟು ಅಂಗಡಿ ನಡೆಸಬೇಕಾದರೆ ಸಾಧ್ಯವಾಗುವುದಿಲ್ಲ. ಬಹಳ ಜಾಸ್ತಿಯಾಗಿದೆ. ಹೀಗಾದುದದರಿಂದ ಅವರು ಸೆಕೆಂಡ್ಸ್ ಮಾಡುವುದಕ್ಕೆ ಹೋಗುತ್ತಾರೆ. ಇದನ್ನು ರೀಕನ್‌ಸಿಡರ್ ಮಾಡಬೇಕೆಂದು ನನ್ನ ಸಲಹೆ. ಅಧಿವೇಶನ ಮುಗಿದ ನಂತರ ತಾವು ಪರಾಮರ್ಶಿಸಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಅಂಕೋಲ) :— ಮಾನ್ಯ ಅಧ್ಯಕ್ಷರೆ, ಸರ್ಕಾರ ಈ ಮಾರಾಟ ತೆರಿಗೆ ಮತ್ತು ಅಬಕಾರಿ ತೆರಿಗೆ ಕಾನೂನುಗಳನ್ನು ತಿದ್ದುಪಡಿಗಾಗಿ ಇವತ್ತು ಸದನದ ಮುಂದೆ ಮಂಡಿಸಿದೆ. ಮಾನ್ಯ ಮುಖ್ಯಮಂತ್ರಿಗಳಲ್ಲಿ ನನ್ನ ವಿನಂತಿ, ಇದನ್ನು ತಾವು ಪುನರ್ ಪರಿಶೀಲನೆ ಮಾಡಬೇಕು. ವ್ಯಾಪಾರಸ್ಥರ ಬೇಡಿಕೆ ಇದೆ, ಸರ್ಕಾರದ ಒತ್ತಡ ಇದೆ, ಹಿಂದಿನ ಸರ್ಕಾರದ ಮೇಲೆಯೂ ಒತ್ತಡ ಇತ್ತು, ಆದರೆ ಹಿಂದಿನ ಸರ್ಕಾರ ನಿರ್ಣಯ ತೆಗೆದುಕೊಂಡಿಲ್ಲ. ನಿರ್ಣಯ ತೆಗೆದುಕೊಳ್ಳದೆ ಇರುವುದಕ್ಕೆ ಕಾರಣಗಳು ಅನೇಕ ಇವೆ. ಮುಖ್ಯಮಂತ್ರಿಗಳಾಗಿ ಈ ಇಲಾಖೆಯ ಬಗ್ಗೆ ಪೂರ್ಣ ಮಾಹಿತಿ ಇದೆ. ಸೇಲ್ಸ್ ಟ್ಯಾಕ್ಸ್‌ನವರು ಏನು ಹೇಳುತ್ತಾರೆ, ಎಕ್ಸೈಸ್‌ನವರು ಏನು ಹೇಳುತ್ತಾರೆ, ಈ ಎರಡೂ ಇಲಾಖೆಗಳ ಮಧ್ಯೆ ಒಂದು ಅಭಿಪ್ರಾಯ ಇಲ್ಲ. ತಾವು ಹೀಗೆ ಮಾಡುವುದರಿಂದ ಆದಾಯ ಕಡಿಮೆಯಾಗುತ್ತದೆ ಎಂದು ಅಭಿಪ್ರಾಯ ವ್ಯಕ್ತಪಡಿಸುವ ಅಧಿಕಾರಿಗಳಿದ್ದಾರೆ. ಈಗಾಗಲೇ ಅದರ ಬಗ್ಗೆ ವರದಿಗಳು ಬಂದಿವೆ. ಹಾಗಾಗಿ ಸರ್ಕಾರಕ್ಕೆ ಆದಾಯ ಬಹಬೇಕೆಂದು ಮುಖ್ಯ ಉದ್ದೇಶ. ಎರಡು ರೀತಿಯ ಟ್ಯಾಕ್ಸ್ ಇರುವುದರಿಂದ ವ್ಯಾಪಾರಸ್ಥರಿಗೆ ಸೆಕೆಂಡ್ಸ್ ಮಾಡುವುದಕ್ಕೆ ತೊಂದರೆಯಾಗುತ್ತಿದೆ. ಹಾಗಾಗಿ ಎಕ್ಸೈಸ್‌ನವರು ಈ ಲಾಬಿಯನ್ನು ಬಲವಾಗಿ ನಿರ್ಮಾಣಮಾಡಿ ತಮ್ಮ ಸರ್ಕಾರದ ಮೇಲೆ ಆ ಲಾಬಿಯ ಪರಿಣಾಮವಾಗಿದೆ ಎಂದು ನನಗೆ ಭಯ ಇದೆ. ಹಾಗಾಗಿ ತಾವು ಇದನ್ನು ಪುನರ್ ಪರಿಶೀಲನೆ ಮಾಡುವುದು ಯೋಗ್ಯ ಇದೆ. ಒತ್ತಡಕ್ಕೆ ಸರ್ಕಾರ ಸಿಲುಕಬಾರದು. ಹೀಗೆ ಮಾಡುವುದರಿಂದ ಸೆಕೆಂಡ್ಸ್ ಮಾರುವುದಕ್ಕೆ ಕ್ರಾಸ್‌ಚೆಕ್ ಆಗುತ್ತದೆ. ಆದರೆ ಈಗ ಕ್ರಾಸ್‌ಚೆಕ್ ಸಿಂಗಲ್ ಪಾಯಿಂಟ್‌ನಲ್ಲಿ ಮಾತ್ರ ಟ್ಯಾಕ್ಸ್ ಕಟ್ಟಿಕೊಂಡು ಅವರು ಪಾರಾಗುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಹೀಗಿದ್ದರೂ ಕೂಡ ಇನ್ನೂ ಎಷ್ಟು ಸೆಕೆಂಡ್ಸ್ ಆಗುತ್ತಿದೆ ಎಂಬುದು ಸರ್ಕಾರದ ಗಮನಕ್ಕೂ ಬಂದಿದೆ. ಆದುದರಿಂದ ತಾವು ಪ್ರಾಮಾಣಿಕವಾಗಿ ಮತ್ತೊಮ್ಮೆ ಪುನರ್‌ಪರಿಶೀಲನೆ ಮಾಡಿ ರಾಜ್ಯದ ಹಿತದೃಷ್ಟಿಯಿಂದ ಆದಾಯ ಹೆಚ್ಚಾಗುವ ರೀತಿಯಲ್ಲಿ ವಿಧೇಯಕದ ಬಗ್ಗೆ ಚಿಂತನೆಯನ್ನು ಮಾಡಬೇಕೆಂದು ಒತ್ತಾಯ ಮಾಡುತ್ತೇನೆ. ಇದರ ಜೊತೆಗೆ ಶೇಕಡ 20ರಷ್ಟು ಆದಾಯ ಹೆಚ್ಚು ಮಾಡುವುದಾಗಿ ಗ್ಯಾರಂಟಿ ಹೇಳಿದ್ದಾರೆಂದು ಹೇಳಿದ್ದೀರಿ. ಈಗಾಗಲೇ ಹೆಚ್ಚು ಜನರು ಕುಡಿದು ಆರೋಗ್ಯವನ್ನು ಕೆಡಿಸಿಕೊಳ್ಳುತ್ತಿರುವುದನ್ನು ನಾವು ದಿನನಿತ್ಯ ನೋಡುತ್ತಲೇ ಇದ್ದೇವೆ. ಹೀಗಿರುವಾಗ ಶೇಕಡ 20ರಷ್ಟು ಹೆಚ್ಚು ಆದಾಯ ಬರಬೇಕೆಂದು ಅವರ ಮೇಲೆ ಒತ್ತಡ ತಂದು ಇದಕ್ಕೆ ಪೂರಕವಾಗಿ ಜನರು ಹೆಚ್ಚು ಕುಡಿಯುವ ಹಾಗೆ ಮಾಡಿದಂತಾಗಿ ಸಮಾಜದ ಮೇಲೆ ಇನ್ನೂ ಹೆಚ್ಚಿನ ದುಷ್ಪರಿಣಾಮ ಆಗುವ ರೀತಿಯಲ್ಲಿ ಸರ್ಕಾರದ ನಿಲುವು ಇರಬಾರದು. ಇನ್ನು ಶೇಕಡ 20 ರಷ್ಟು ಹೆಚ್ಚು ಆದಾಯ ಮಾಡಿಕೊಡುತ್ತಾರೆ ಎಂಬುದಕ್ಕೆ ಯಾವ ಗ್ಯಾರಂಟಿಯೂ ಇಲ್ಲದಿರುವುದರಿಂದ ಅದನ್ನು ಸರ್ಕಾರ ಕಾನೂನುಬದ್ಧವಾಗಿ ಅವರಿಂದ ವಸೂಲು ಮಾಡುವುದಕ್ಕೂ ಆಗುವುದಿಲ್ಲ. ಆದುದರಿಂದ ಈ ರೀತಿಯ ವಿಧೇಯಕವನ್ನು ತರಾತುರಿಯಲ್ಲಿ ಸರ್ಕಾರ ತೆಗೆದುಕೊಳ್ಳುವುದು

ಬೇಡ. ಇದರ ಬಗ್ಗೆ ಸೇಲ್ಸ್ ಟ್ಯಾಕ್ಸ್‌ನವರು ಏನು ಹೇಳುತ್ತಾರೆ, ಎಕ್ಸೈಸ್‌ನವರು ಏನು ಹೇಳುತ್ತಾರೆ, ಹಿಂದಿನ ಸರ್ಕಾರ ಇದನ್ನು ಏತಕ್ಕಾಗಿ ತೆಗೆದುಕೊಂಡಿರಲಿಲ್ಲ ಎಂಬ ಬಗ್ಗೆ ಚಿಂತನೆಗಳನ್ನು ಮಾಡಿ ತದನಂತರ ವಿಧೇಯಕವನ್ನು ತರಬೇಕೆಂದು ಹಾಗೂ ಶೇಕಡ 20ರಷ್ಟು ಆದಾಯವನ್ನು ಹೆಚ್ಚು ಮಾಡಬೇಕಂಬ ಒತ್ತಡವನ್ನು ಕೂಡ ಹಾಕಬಾರದೆಂದು ಈ ಸಂದರ್ಭದಲ್ಲಿ ನಾನು ಒತ್ತಾಯವನ್ನು ಮಾಡುತ್ತೇನೆ.

ಶ್ರೀ ಕೆ. ಶ್ರೀನಿವಾಸಗೌಡ :— ಮಾನ್ಯ ಅಧ್ಯಕ್ಷರೆ, ಕಳೆದ ಬಾರಿಯೇ ನಾನು ಐ.ಎಂ.ಎಫ್.ಎಲ್‌ಗೆ ತೆರಿಗೆಯನ್ನು ಫ್ಯಾಕ್ಟರಿಯ ಹಂತದಲ್ಲಿಯೇ ವಿಧಿಸಬೇಕೆಂದು ಹೇಳಿದ್ದೆ. ಇದನ್ನು ಬಿಟ್ಟು ಎರಡು ರೀತಿಯ ತೆರಿಗೆಯನ್ನು ಫ್ಯಾಕ್ಟರಿ ಬಿಟ್ಟ ಮೇಲೆ ಬೇರೆ ಬೇರೆ ಹಂತಗಳಲ್ಲಿ ಹಾಕಲು ಸಾಧ್ಯವಾಗುವುದಿಲ್ಲ. ಆದುದರಿಂದ ಇವೆರಡನ್ನು ಸೇರಿ ಸಿಂಗಲ್ ಪಾಯಿಂಟ್ ಟ್ಯಾಕ್ಸನ್ನು ಫ್ಯಾಕ್ಟರಿ ಹಂತದಲ್ಲಿಯೇ ಹಾಕುವುದು ಒಳ್ಳೆಯದೆಂದು ಹೇಳುತ್ತಾ ಈ ಪ್ರಯೋಗವನ್ನು 6 ತಿಂಗಳ ಮಟ್ಟಿಗೆ ಮಾಡಿ ತದನಂತರ ಏನಾದರೂ ಹೆಚ್ಚುಕಡಿಮೆಯಾದರೆ ಮುಂದೆ ಚರ್ಚೆ ಮಾಡಬಹುದಾದ್ದರಿಂದ ಈಗ ಈ ವಿಧೇಯಕವನ್ನು ನಾನು ಒಪ್ಪಿಕೊಳ್ಳುತ್ತೇನೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

+ ಶ್ರೀ ಎ. ರಾಮದಾಸ್ (ಮೈಸೂರು) :— ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಸದುದ್ದೇಶ ಇಟ್ಟುಕೊಂಡು ಈ ವಿಧೇಯಕವನ್ನು ತಂದಿದ್ದೇನೆ ಎಂದಿದ್ದಾರೆ. ಸಿಂಗಲ್ ಪಾಯಿಂಟ್ ಟ್ಯಾಕ್ಸ್ ಆಗಬೇಕು ಎನ್ನುವ ಉದ್ದೇಶವನ್ನು ಇದರಲ್ಲಿ ಹೇಳಿದ್ದಾರೆ. ಇದರಿಂದ ಒಳ್ಳೆಯದಾಗುತ್ತದೆ ಎಂದರೆ ನಾವು ವಿರೋಧವನ್ನು ಮಾಡುವುದಿಲ್ಲ. ಆದರೆ ಇಲಾಖೆಯಲ್ಲಿ ಎಲ್ಲಿ ಲೋಪದೋಷಗಳಿವೆ ಮತ್ತು ಅದನ್ನು ಹೇಗೆ ಸರಿಮಾಡಬಹುದು ಎನ್ನುವ ಬಗ್ಗೆ ಮಾತ್ರ ನಾನು ಹೇಳುವುದಕ್ಕೆ ಇಷ್ಟ ಪಡುತ್ತೇನೆ. ಹಾಲಿ ವ್ಯವಸ್ಥೆಯಲ್ಲಿ ಉತ್ಪಾದನೆ ಆಗತಕ್ಕಂಥ ಸ್ಥಳದಲ್ಲಿ ಎಕ್ಸೈಸ್ ಆಫೀಸರ್ ಎಕ್ಸೈಸ್ ಡ್ಯೂಟಿಯನ್ನು ಹಾಕುವುದಕ್ಕೆ ತಮ್ಮದೇ ಆದ ರೀತಿಯಲ್ಲಿ ಕೆಲಸವನ್ನು ಮಾಡುತ್ತಿರುತ್ತಾರೆ. ಇವರಲ್ಲದೇ ಸೇಲ್ಸ್ ಟ್ಯಾಕ್ಸ್ ಡಿಪಾರ್ಟ್‌ಮೆಂಟ್ ಅಧಿಕಾರಿಯೂ ಕೂಡ ಅಲ್ಲಿದ್ದು ಸೇಲ್ಸ್ ಬಗ್ಗೆ ದಾಖಲೆ ಮಾಡುತ್ತಿರುತ್ತಾರೆ. ಹೀಗಾಗಿ ಉತ್ಪಾದನಾ ವಸ್ತು ಎರಡು ಪಾಯಿಂಟ್‌ಗಳಲ್ಲಿ ಚೆಕ್ ಆಗುತ್ತಿರುತ್ತದೆ. ಈ ವ್ಯವಸ್ಥೆ ಇದ್ದರೂ ಕೂಡ ಸೆಕೆಂಡ್ಸ್ ಮತ್ತು ಥರ್ಡ್ಸ್ ರೀತಿಯಲ್ಲಿ ಉತ್ಪಾದಕ ವಸ್ತು ಹೋಗುತ್ತಿದೆ ಎನ್ನುವ ಮಾತನ್ನು ಸರ್ಕಾರ ಕೊಟ್ಟಿರುವ ಉತ್ತರದಲ್ಲಿಯೇ ಹೇಳಲಾಗಿದೆ. ಇದನ್ನು ಕಂಟ್ರೋಲ್ ಮಾಡುವುದಕ್ಕಾಗಿ ಸರ್ಕಾರ ಕ್ರಮ ತೆಗೆದುಕೊಳ್ಳುತ್ತಿದೆ ಎಂದು ಹೇಳಿರುವಾಗ ಇನ್ನು ಕೇವಲ ಒಂದೇ ಪಾಯಿಂಟ್‌ನಲ್ಲಿ ಟ್ಯಾಕ್ಸ್ ಹಾಕಲು ಒಬ್ಬ ಅಧಿಕಾರಿಯನ್ನೇ ಫಿಕ್ಸ್ ಮಾಡುವ ವ್ಯವಸ್ಥೆ ಬಂದರೆ ಯಾವ ರೀತಿಯಲ್ಲಿ ಸೆಕೆಂಡ್ಸ್, ಥರ್ಡ್ಸ್‌ನ್ನು ಕಂಟ್ರೋಲ್ ಮಾಡುವುದಕ್ಕೆ ಆಗುತ್ತದೆ ಮತ್ತು ತೆರಿಗೆ ಸೋರಿಕೆಯನ್ನು ಯಾವ ರೀತಿಯಲ್ಲಿ ಕಂಟ್ರೋಲ್ ಮಾಡುವುದಕ್ಕೆ ಆಗುತ್ತದೆ ಎಂಬುದನ್ನು ನಾನು ಕೇಳಬಯಸುತ್ತೇನೆ. ಇನ್ನು ಎರಡನೆಯದಾಗಿ

ಎಕ್ಸೈಸ್ ಡಿಪಾರ್ಟ್‌ಮೆಂಟ್‌ಗೆ ಸಂಬಂಧಪಟ್ಟ ಹಾಗೆ ಕಾನೂನು ಚೌಕಟ್ಟಿನಲ್ಲಿ ಇರುವ ನಿಯಮಗಳಲ್ಲಿ ಹಲವಾರು ಸಮಸ್ಯೆಗಳಿವೆ. ಈಗ ಎಕ್ಸೈಸ್ ಡ್ಯೂಸ್ ಎಲ್ಲೆಲ್ಲಿ ಇದೆ ಇದನ್ನು ಎಕ್ಸೈಸ್ ಡಿಪಾರ್ಟ್‌ಮೆಂಟಿನ ಕಾನೂನಿನ ಚೌಕಟ್ಟಿನೊಳಗೆ ವಸೂಲಿ ಮಾಡಲು ಸಾಧ್ಯವೇ ಇಲ್ಲದಿರುವುದರಿಂದಲೇ ವಸೂಲಿ ಮಾಡುವ ಕೆಲಸವನ್ನು ಕಂದಾಯ ಇಲಾಖೆಗೆ ವಹಿಸಿ ಅರಿಯರ್ಸ್ ಆಫ್ ಲ್ಯಾಂಡ್ ರೆವಿನ್ಯೂ ಎಂದು ಹೇಳಿ ಅದನ್ನು ವಸೂಲಿ ಮಾಡಲು ಕ್ರಮವನ್ನು ಸರ್ಕಾರ ಕೈಗೊಳ್ಳುತ್ತಿದೆ. ಹೀಗಾಗಿರುವಾಗ ಎಕ್ಸೈಸ್ ಡ್ಯೂಟಿಯನ್ನೇ ವಸೂಲಿ ಮಾಡಲಾಗದ ಎಕ್ಸೈಸ್ ಡಿಪಾರ್ಟ್‌ಮೆಂಟ್‌ನವರಿಗೆ ಎರಡು ರೀತಿಯ ತೆರಿಗೆಯನ್ನು ವಸೂಲಿ ಮಾಡಲು ಬಿಟ್ಟರೆ ಅವರು ಹೇಗೆ ಕಲೆಕ್ಟ್ ಮಾಡುತ್ತಾರೆ ಎಂಬುದೇ ನನ್ನ ಪ್ರಶ್ನೆಯಾಗಿದೆ. ಸರ್ಕಾರ ಕೊಟ್ಟಿರುವ ಉತ್ತರದಲ್ಲಿರುವಂತೆ 1998 ರಲ್ಲಿ 460.37 ಕೋಟಿ ರೂಪಾಯಿಗಳು ಬಾಕಿ ಉಳಿದಿದ್ದು ಇದಕ್ಕೆ ಬಡ್ಡಿ 5.04 ಕೋಟಿ ರೂಪಾಯಿಗಳಾಗಿದೆ, ದಿನಾಂಕ: 30-09-1999ಕ್ಕೆ 560.03 ಕೋಟಿ ರೂಪಾಯಿಗಳು ಬರಬೇಕಾದ ಬಾಕಿಯಾಗಿದೆ. ಮಾರ್ಚ್ ಕೊನೆಯವರೆಗೆ ಎಕ್ಸೈಸ್ ಡಿಪಾರ್ಟ್‌ಮೆಂಟ್‌ನಲ್ಲಿ ಡ್ಯೂಸ್ 643.02 ಲಕ್ಷ ರೂಪಾಯಿಗಳಾಗಿರುವಾಗ ಇದನ್ನೆ ವಸೂಲಿ ಮಾಡಲು ಎಕ್ಸೈಸ್ ಡಿಪಾರ್ಟ್‌ಮೆಂಟ್‌ನವರಿಗೆ ಆಗದಿರುವಾಗ ಹೊಸದಾಗಿ ಈ ಹಣವನ್ನು ಅವರು ಹೇಗೆ ಕಲೆಕ್ಟ್ ಮಾಡುತ್ತಾರೆ ಎಂಬ ಬಗ್ಗೆ ಮುಖ್ಯ ಮಂತ್ರಿಗಳು ಬಾಕಿ ಉತ್ತರ ಕೊಡಬೇಕು. ಇನ್ನು ದಾಸಪ್ಪ ಅಂಡ್ ಕಂಪನಿಯೊಂದರಿಂದಲೇ 24 ಕೋಟಿ ರೂಪಾಯಿಗಳಿ ಬಾಕಿ ಬರಬೇಕಾಗಿದೆಯೆಂದು ಸರ್ಕಾರವೇ ಉತ್ತರ ಕೊಟ್ಟಿದೆ. ಆದುದರಿಂದ ದಾಸಪ್ಪ ಅಂಡ್ ಕಂಪನಿಯವರ ಹೆಸರಿನಲ್ಲಿಯೇ ಬೇರೆ ಬೇರೆ ಆಸ್ತಿಗಳೇನಿವೆ ಅದನ್ನು ಸರ್ಕಾರ ಮುಟ್ಟುಗೋಲು ಹಾಕಿಕೊಂಡು ವಸೂಲಿ ಮಾಡಬಹುದು ಎನ್ನುವ ವಿಚಾರ ಕೂಡ ಇದೆ. ಇವರ ಹೆಸರಿನಲ್ಲಿ ವಿನಾಯಕ ಥಿಯೇಟರ್, ಮೆಜೆಸ್ಟಿಕ್ ಥಿಯೇಟರ್, ಕಪಾಲಿ ಥಿಯೇಟರ್ ಇದೆ. ಹೀಗಿದ್ದರೂ ಕೂಡ 24 ಕೋಟಿ ರೂಪಾಯಿಗಳನ್ನು ಇದುವರೆಗೆ ಎಕ್ಸೈಸ್ ಡಿಪಾರ್ಟ್‌ಮೆಂಟ್‌ನವರು ಏಕೆ ಕಲೆಕ್ಟ್ ಮಾಡಿಲ್ಲ? ಹೀಗಿರುವಾಗ ಸೇಲ್ಸ್ ಟ್ಯಾಕ್ಸ್ ವಸೂಲಿಯನ್ನು ಎಕ್ಸೈಸ್ ಡಿಪಾರ್ಟ್‌ಮೆಂಟ್‌ಗೆ ಕೊಟ್ಟರೆ ಇನ್ನೂ ಎಷ್ಟು ಬಾಕಿ ಹೆಚ್ಚಾಗುತ್ತದೆ ಎನ್ನುವ ವಿಚಾರವನ್ನು ಯೋಚನೆ ಮಾಡಬೇಕಾಗುತ್ತದೆ. ಇನ್ನು ಆಹಾರ ಸಚಿವರು ಮಾತನಾಡುತ್ತಾ ಪಕ್ಷ ಭೇದ ಮರೆತು ಯಾರೇ ವ್ಯಕ್ತಿ ಇರಬಹುದು, ಯಾವುದೇ ಪಕ್ಷದ ಕಾರ್ಯಕರ್ತರಾಗಲಿ ಕಾನೂನು ಬಾಹಿರವಾಗಿ ಅಕ್ರಮ ವ್ಯವಹಾರ ನಡೆಯುತ್ತಿದ್ದರೆ ಅಂಥವರ ಮೇಲೆ ಸರ್ಕಾರ ಕ್ರಮ ತೆಗೆದುಕೊಳ್ಳುತ್ತದೆ ಎಂದು ಹೇಳಿದರು. ಇಂದು ತಮ್ಮ ಪಕ್ಷದವರೊಬ್ಬರಾದ "ಒರಿಜಿನಲ್ ಚಾಯ್ಸ್" ವಿಸ್ಕಿಗೆ ಟ್ಯಾಕ್ಸ್ ಹಾಕಿದ್ದೇ ಆದರೆ ಅದನ್ನು 300 ರೂಪಾಯಿಗಳಿಗೆ ಮಾರಬೇಕು. ಆದರೆ ಆದು ಮಾರುಕಟ್ಟೆಯಲ್ಲಿ 180 ರೂಪಾಯಿಗಳಿಗೆ ಸಿಗುತ್ತಿದೆ. ಇದು ಸೆಕೆಂಡ್ಸ್ ಅಥವಾ ಥರ್ಡ್? ಅದು ಯಾರದ್ದು? ಯಾವ ಕಂಪನಿಯಿಂದ ಬರುತ್ತಿದೆ ಎನ್ನುವುದನ್ನು ಹೇಳಬೇಕಾದ ವಿಚಾರವೇ ಆಗಿದೆ. ಸರ್ಕಾರದಲ್ಲಿರುವಂಥ ಒಬ್ಬರ ಮಾಲೀಕತ್ವದಲ್ಲಿರುವ

ಕಂಪನಿ 300 ರೂಪಾಯಿಗೆ ಮಾರಾಟ ಮಾಡಬೇಕಾಗಿರುವ ವಿಸ್ಕಿ ಇಂದು ಅಂಗಡಿಯಲ್ಲಿ 180 ರೂಪಾಯಿಗಳಿಗೆ ಸಿಗುತ್ತಿದೆಯೆಂದರೆ ಅದನ್ನು ನಾವು ಸೆಕೆಂಡ್ಸ್ ಎಂದು ಕರೆಯಬೇಕೇ ಅಥವಾ ಥರ್ಡ್ಸ್ ಎಂದು ಕರೆಯಬೇಕೆ? ಮಾನ್ಯ ಮುಖ್ಯಮಂತ್ರಿಗಳಿಗೆ ಆಯಿಲ್ ಗ್ರೋಯರ್ಸ್ ಫೆಡರೇಶನ್‌ನವರು ಒಂದು ಮನವಿಯನ್ನು ಕೊಟ್ಟು ಆಯಿಲ್ ಕಂಪನಿಗಳು ತುಂಬಾ ಕಷ್ಟದಲ್ಲಿದ್ದು ಮಲ್ಟಿಪಲ್ ಸೇಲ್ಸ್ ಪಾಯಿಂಟ್‌ಗಳಿರುವುದರಿಂದ ಇದನ್ನು ಕೇವಲ ಸಿಂಗಲ್ ಪಾಯಿಂಟ್‌ಗೆ ತಂದು ಕೇವಲ ಆಯಿಲ್‌ಗೆ ಮಾತ್ರ ಟ್ಯಾಕ್ಸ್ ಹಾಕಿ ಎಂದು ಕೇಳಿಕೊಂಡರು. ಆದೆ ಸರ್ಕಾರ ಎಣ್ಣೆ, ಹಿಂಡಿ, ಎಣ್ಣೆ ಕಾಳುಗಳ ಮೇಲೂ ಸೆಲ್ಸ್ ಪಾಯಿಂಟ್‌ನಲ್ಲಿ ಟ್ಯಾಕ್ಸ್

ಹಾಕುತ್ತಿದೆ. ಆದರೆ ಇಲ್ಲಿ ಅಷ್ಟೂ ಪಾಯಿಂಟ್‌ಗಳನ್ನು ತೆಗೆದು, ಕೇವಲ ಅಬಕಾರಿ ಇಲಾಖೆಗೆ ಸಂಬಂಧಪಟ್ಟಂಥಾದ್ದಕ್ಕೆ ಮಾತ್ರ ಇದನ್ನು ಏಕೆ ಅನ್ವಯ ಮಾಡುತ್ತಿದ್ದೀರಿ? ಮೈಸೂರು ಗ್ರಾಮಾಂತರ ಜಿಲ್ಲೆಯಲ್ಲಿ ತಂಬಾಕು ಬೆಳೆಯುತ್ತಿರತಕ್ಕಂಥವರು ತಮಗೆ ಒಂದು ಮನವಿಯನ್ನು ಕೊಟ್ಟಿದ್ದು, ಮಲ್ಟಿಪಲ್ ಪಾಯಿಂಟ್ ಟ್ಯಾಕ್ಸ್ ವ್ಯವಸ್ಥೆಯಿಂದ ತುಂಬ ಕಷ್ಟವಾಗುತ್ತಿದೆ ಎನ್ನುವ ವಿಚಾರವನ್ನು ಹೇಳಿದ್ದಾರೆ. ಅದೇ ರೀತಿ, ಸಮಗ್ರವಾಗಿ ಎಲ್ಲಾ ಇಲಾಖೆಗಳಲ್ಲಿ, ಎಲ್ಲೆಲ್ಲಿ ಈ ರೀತಿಯ ಮನವಿಗಳು ಬಂದಿವೆ ಆ ಎಲ್ಲಾ ಕಡೆ ಇಂಥ ವಿಚಾರವನ್ನೇ ಅಪ್ಲೈ ಮಾಡುವಂಥಾದ್ದು ಏಹಾಗಬಾರದು? ಹಾಗಾದದರೆ ಬಹಳ ಒಳ್ಳೆಯದಾಗುತ್ತದೆ ಎಂದು ನನಗೆ ಅನ್ನಿಸುತ್ತದೆ. ಇವತ್ತು ನಾನು ಈ ವಿಚಾರದಲ್ಲಿ ಹೆಚ್ಚು ಹೇಳಲು ಹೋಗುವುದಿಲ್ಲ. ನಾನು ಈಗಾಗಲೇ ಒಂದು ಉದಾಹರಣೆಯನ್ನು ನಿಮ್ಮ ಮುಂದೆ ಇಟ್ಟಿದ್ದು, ಇದುವರೆಗೂ ಈ ಇಲಾಖೆಯಿಂದ 24 ಕೋಟಿ ರೂಪಾಯಿಗಳನ್ನು ಏಕೆ ವಸೂಲು ಮಾಡಲು ಆಗಿಲ್ಲ ಎನ್ನುವ ವಿಚಾರವನ್ನು ತಮ್ಮ ಮುಂದೆ ಹೇಳಿದ್ದೇನೆ. ವಸೂಲು ಮಾಡಲು ಎರಡು ಪಾಯಿಂಟ್‌ಗಳಿದ್ದು, ಡಬಲ್ ಚೆಕ್ ಇರುವಂಥ ವ್ಯವಸ್ಥೆಯಾಗಬೇಕು. ಮಲ್ಟಿಪಲ್ ಪಾಯಿಂಟ್ ಟ್ಯಾಕ್ಸ್‌ನಿಂದ ಯಾವ ರೀತಿ ಜಟಿಲವಾಗಿದೆ ಎಂದು ಅವರು ತಮ್ಮ ಮುಂದೆ ಮನವರಿಕೆ ಮಾಡಿದ್ದಾರೆ, ಆದ್ದರಿಂದ ಇದರಲ್ಲಿ ಸಡಲಿಕೆ ಯಾರ ದೃಷ್ಟಿಯಲ್ಲಿ ಆಗಬೇಕು? ಅವರ ದೃಷ್ಟಿಯಲ್ಲೇ ಅಥವಾ ಸರ್ಕಾರದ ದೃಷ್ಟಿಯಲ್ಲೇ ಎನ್ನುವುದು ಯಕ್ಷಪ್ರಶ್ನೆ. ಆದ್ದರಿಂದ, ಹಣಕಾಸಿನ ವ್ಯವಸ್ಥೆಯನ್ನು ಸಂಪೂರ್ಣವಾಗಿ ಕಂಟ್ರೋಲ್ ಮಾಡುತ್ತಿರುವಂಥ ಮುಖ್ಯಮಂತ್ರಿಗಳು ಇದನ್ನು ಪುನರ್ ಪರಿಶೀಲಿಸಬೇಕೆಂದು ಹೇಳುತ್ತೇನೆ. ಅವರಿಗೆ ಕೇವಲ ಸಿಂಗಲ್ ಪಾಯಿಂಟ್‌ಅನ್ನು ಮಾಡಿ ಮತ್ತೆ ಸೆಕೆಂಡ್ಸ್, ಥರ್ಡ್‌ಗೆ ಹೋಗಲು ಅವಕಾಶ ಮಾಡಿಕೊಡಬಾರದು ಎನ್ನುವ ಮಾತನ್ನು ಹೇಳಿ, ಇದನ್ನು ಪುನರ್ ಪರಿಶೀಲನ್ ಮಾಡಬೇಕು ಎಂದು ಮತ್ತೊಂದು ಬಾರಿ ತಮ್ಮ ಮೂಲಕ ಕೇಳುತ್ತಿದ್ದೇನೆ.

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು) :— ಮಾನ್ಯ ಅಧ್ಯಕ್ಷರೇ, ಉದ್ದೇಶ ಸ್ಪಷ್ಟವಾಗಿದೆ. ನಮ್ಮ ಸಂಪನ್ಮೂಲಗಳ ಕ್ರೋಢೀಕರಣವಾಗಬೇಕು. ಅಭಿವೃದ್ಧಿ ಆಗಬೇಕು, ಸಂಪನ್ಮೂಲಗಳು ಹೆಚ್ಚಾಗಲಿ ಎನ್ನುವ ಉದ್ದೇಶದಿಂದ ಮಾಡಿರುವಂಥಾದ್ದು ಇದು. ತೆರಿಗೆ ಕೊಡುವವರ ಜೊತೆಯಲ್ಲಿ ಒಂದು ರೀತಿಯ ಫ್ರೆಂಡ್ಲಿ ಓವರ್ ಚಾಯ್ಸ್ ಮಾಡುವುದರಿಂದ

ನಮ್ಮ ತೆರಿಗೆ ಸಂಗ್ರಹಣೆ ಜಾಸ್ತಿಯಾಗುವುದಾದರೆ ಆ ಪ್ರಯತ್ನಗಳನ್ನು ಏಕೆ ಮಾಡಬಾರದು ಎನ್ನುವ ದೃಷ್ಟಿಯಿಂದ ಎಕ್ಸ್‌ಪೆರಿಮೆಂಟಲ್ ಮೆಷರ್ ಆಗಿ ಡಿಸೆಂಬರ್, ಜನವರಿ, ಫೆಬ್ರವರಿ ಈ 3-4 ತಿಂಗಳಲ್ಲಿ ಇದನ್ನು ಮಾಡುತ್ತಿದ್ದೇವೆ. ಈ ಸದನ ಇದಕ್ಕೆ ಒಪ್ಪಿಗೆ ಕೊಡುವುದರ ಮೂಲಕ we are putting them to a test, whether they will make up their commitments or not. ಹುಬ್ಬಳ್ಳಿ, ಧಾರವಾಡ ಮತ್ತಿತರ ನಗರಗಳಲ್ಲಿ ಅನ್‌ಲೈಸನ್ಸ್ಡ್ ಬಾರ್‌ಗಳು ಮತ್ತು ಅನ್‌ಲೈಸನ್ಸ್ಡ್ ವ್ಯವಹಾರಗಳು ಬಹಳ ನಡೆಯುತ್ತಿವೆ ಎಂದು ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದರು. ಈಗಾಗಲೇ ನಾವು ಅಲ್ಲಿ ಪೊಲೀಸ್ ಮತಿಯಿಂದ ಕೆಲವು ಸುಧಾರಣೆಗಳನ್ನು ತರಲು ಪ್ರಯತ್ನಪಟ್ಟಿದ್ದೇವೆ.

ಶ್ರೀ ಜಗದೀಶ್ ಶೆಟ್ಟರ್ :— ಆದರೆ ರಿಸಲ್ಟ್ ಏನೂ ಇಲ್ಲ. ಹಿಂದೆ ಇದ್ದಂಥ ಬ್ಯಾಚನ್ನು ಚೇಂಜ್ ಮಾಡಿದ್ದೀರಿ. ಅದಕ್ಕಾಗಿ ನಿಮಗೆ ನಾನು ಅಭಿನಂದನೆ ಸಲ್ಲಿಸುತ್ತಿದ್ದೇನೆ. But they stand still.

ಶ್ರೀ ಎಸ್.ಎಸ್. ಪಾಟೀಲ್ :— ಗದಗ್‌ನಲ್ಲಿ ಮೊನ್ನೆ ಒಬ್ಬನ ಅಂಗಡಿಯನ್ನು ಪೊಲೀಸಿನವರು ಬಂದ್ ಮಾಡಿದರು. ಅವನು ಬಂದು ನನಗೆ ಹೇಳಿದ. ಲೈಸೆನ್ಸ್ ಇಲ್ಲದೇ ಹೇಗೆ ನಡೆಸುತ್ತೀಯಪ್ಪಾ ಎಂದು ಕೇಳಿದ್ದಕ್ಕೆ ಅವನು, ಲೈಸನ್ಸ್ ಇಲ್ಲದೇ ಬಹಳಷ್ಟು ಜನರು ನಡೆಸುತ್ತಿದ್ದಾರೆ ಎಂದು ಹೇಳಿದ. ಹಾಗಾದರೆ ಲೈಸನ್ಸ್ ಇಲ್ಲದೇ ನಡೆಸುವವರ ಲಿಸ್ಟ್ ತೆಗೆದುಕೊಂಡು ಬಾ, ಅವುಗಳನ್ನೂ ಬಂದ್ ಮಾಡಿಸೋಣ ಎಂದು ಹೇಳಿದೆ. ಸುಮಾರು 50-60 ಹೆಸರಿನ ಲಿಸ್ಟ್ ತಂದು ಕೊಟ್ಟ. ಇವರು ಲೈಸೆನ್ಸ್ ಇಲ್ಲದೇ ನಡೆಸುತ್ತಿದ್ದಾರೆ. ಒಂದು ರೀತಿ ಪೊಲೀಸ್ ಲೈಸೆನ್ಸ್‌ನಿಂದ ನಡೆಸುತ್ತಿದ್ದಾರೆ.

ಶ್ರೀ ಕೆ. ಶ್ರೀನಿವಾಸಗೌಡ :— ನಾವು ಕೋಲಾರ ಬಾರ್ಡರ್‌ನಲ್ಲಿದ್ದೇವೆ. ಅಲ್ಲಿ ಸ್ವಂತ: ಮೆಷಿನ್‌ಗಳನ್ನಿಟ್ಟುಕೊಂಡು ಆರ್ಕಾಕ್ ಮಾಡುತ್ತಿದ್ದಾರೆ. ಬಹಳ ಊರುಗಳಲ್ಲಿ ಇದೇ ಒಂದು ದೊಡ್ಡ ದಂಧೆಯಾಗಿದೆ. ಒಂದು ದಿವಸ ಪೊಲೀಸಿನವರು ಇದನ್ನು ಹಿಡಿಯುತ್ತಾರೆ, ಪತ್ರಿಕೆಗಳಲ್ಲಿ ಹಾಕಿಸಿಕೊಳ್ಳುತ್ತಾರೆ, ಮತ್ತೆ ಅವರ ಮೇಲೆ ಏನೂ ಕ್ರಮವಾಗುವುದಿಲ್ಲ. ಇದು ಪೊಲೀಸ್ ಪರ್ಮಿಟ್‌ನಿಂದ ನಡೆಯುವಂಥಾದ್ದು ಎಂದು ಹೇಳಿದರೆ ತಪ್ಪಾಗಲಾರದು. ಸ್ಯಾಚೆಟ್‌ಗಳನ್ನು ಮಾಡುವಂಥ ಪ್ಯಾಕಿಂಗ್ ಮೆಷಿನ್ ಕೂಡ ಇಟ್ಟಿದ್ದಾರೆ. ಮನೆಗಳಲ್ಲಿ ಮೆಷಿನ್‌ಗಳನ್ನು ಇಟ್ಟುಕೊಂಡು ಕಾರ್ಖಾನೆಗಳನ್ನು ನಡೆಸುವಂತೆ ನಡೆಸುತ್ತಿದ್ದಾರೆ. ಇದರಿಂದಾಗಿ ಸರ್ಕಾರದ ಬೊಕ್ಕಸಕ್ಕೆ ಬರುವಂಥ ಕೋಟ್ಯಾಂತರ ರೂಪಾಯಿ ಆದಾಯ ಕಡಿಮೆಯಾಗುತ್ತಿದೆ. ಇದನ್ನು ನಿಲ್ಲಿಸಲು ಬಹಳ ಮುಖ್ಯವಾಗಿ ಕ್ರಮ ತೆಗೆದುಕೊಳ್ಳಬೇಕು. ಇಲ್ಲದಿದ್ದರೆ ಸರ್ಕಾರದ ಬೊಕ್ಕಸಕ್ಕೆ ಬರುವ ದುಡ್ಡು ನಿಂತು ಹೋಗುತ್ತದೆ.

ಶ್ರೀ ಜಗದೀಶ್ ಶೆಟ್ಟರ್ :— ಹುಬ್ಬಳ್ಳಿಗೆ ಬರುವುದಕ್ಕೆ ಮುಂಚೆ ಹೇಗಿರುತ್ತಾನೋ ಗೊತ್ತಿಲ್ಲ. ಆದರೆ ಹುಬ್ಬಳ್ಳಿಯಿಂದ ಹೊರಗಡೆ ಹೋಗುವಾಗ ಕೋಟ್ಯಾಧಿಪತಿಗಳಾಗಿ ಹೋಗುತ್ತಾರೆ. ಅಂದರೆ ತಾವೇನೆ ಲೆಕ್ಕ ಹಾಕಿಕೊಳ್ಳಿ.

ಶ್ರೀ ಸಿ ಬೈರೇಗೌಡ :— ಇದೆಲ್ಲ ಬರೀ ಬಾಯಿ ಮಾತಿನ ಫೈಟಿಂಗ್. ನಿಜಾಂಶ ಇರತಕ್ಕಥಾದ್ದೇ ಬೇರೆ. ವಾಸ್ತವಾಂಶಗಳೇ ಬೇರೆ, ಇಲ್ಲಿ ನಾವು ಮಾತನಾಡುತ್ತಿರತಕ್ಕಂಥಾದ್ದೇ ಬೇರೆ. ಆದ್ದರಿಂದ ನಾನು ಇದಗ ಬಗ್ಗೆ ಹೆಚ್ಚಿಗೆ ಮಾತನಾಡಲು ಹೋಗಲಿಲ್ಲ. ಮಾತನಾಡುವುದಕ್ಕಿಂತ ಮಾತನಾಡದೇ ಇರುವುದೇ ವಾಸಿ ಎಂದು ನಾನು ಸುಮ್ಮನೆ ಕುಳಿತ್ತಿದ್ದೇನೆ.

ಅಧ್ಯಕ್ಷರು :— ಎಲ್ಲರೂ ಬೈರೇಗೌಡರ ಹಾಗೆ ಸುಮ್ಮನಾದರೆ ನನಗೆ ಬಹಳ ಉತ್ತಮವಾಗುತ್ತದೆ.

ಶ್ರೀ ಎಸ್.ಎಂ. ಕೃಷ್ಣ :— ಹುಬ್ಬಳ್ಳಿ ಧಾರವಾಡದಲ್ಲಿ ಬಹಳ ವರ್ಷಗಳಿಂದ ಇದ್ದವರನ್ನೆಲ್ಲಾ ಎತ್ತಂಗಡಿ ಮಾಡುವುದರಿಂದ ಯಾವುದಾದರೊಂದು ರೀತಿಯಲ್ಲಿ ಸುಧಾರಣೆಯಾಗುತ್ತದೇನೋ ಎಂದು ನನ್ನ ಮೂಲಭೂತವಾದ ಅನಿಸಿಕೆಯಾಗಿತ್ತು. ಆದರೆ ಯಾವ ಸುಧಾರಣೆಯೂ ಆಗಿಲ್ಲ ಎಂದು ಮಾನ್ಯ ವಿರೋಧ ಪಕ್ಷದ ನಾಯಕರು ಹೇಳುತ್ತಿದ್ದಾರೆ. Unlicenced sale of liquor and other beverages. ಎಕ್ಸೈಸ್ ಡಿಪಾರ್ಟ್‌ಮೆಂಟ್‌ಗೆ ಸ್ವಲ್ಪ ಹೆಚ್ಚು ಜನ ಬೇಕಾಗುತ್ತದೆ. ಇವತ್ತು ನಮಗೆ ಇರತಕ್ಕಂಥ ಕೊರತೆ ಏನೆಂದರೆ, to enforce our laws we depend on some other agency. ಯಾವಾಗ ನಾವು ಇನ್ನೊಂದು ಏಜೆನ್ಸಿ ಮೇಲೆ ಡಿಪೆಂಡ್ ಆಗುತ್ತೇವೆ, ಆಗ ಅಕೌಂಟಬಿಟಿಲಿ ಕಡಿಮೆಯಾಗುತ್ತದೆ. ಆದ್ದರಿಂದ ಎಕ್ಸೈಸ್ ಡಿಪಾರ್ಟ್‌ಮೆಂಟ್‌ನಲ್ಲಿ ಖಾಲಿ ಇರುವ ಬಹಳ ಹುದ್ದೆಗಳನ್ನು ತುಂಬಬೇಕಾದಂಥ ಕಾಲ ಈಗ ಸನ್ನಿಹಿತವಾಗಿದೆ. Enforcement is not possible, unless they have enforcement powers and men to enforce them. ಆದ್ದರಿಂದಲೇ ನಾವು ಪೊಲೀಸಿನವರ ಸಹಾಯಕ್ಕೆ ಹೋಗಬೇಕಾಗುತ್ತದೆ. ಆದ್ದರಿಂದ ತಾವು ಹೇಳತಕ್ಕಂಥಾದ್ದನ್ನು ನಾವು ಮನಸ್ಸಿನಲ್ಲಿ ಇಟ್ಟುಕೊಂಳ್ಳುತ್ತೇವೆ. ಮಾನ್ಯ ವಿರೋಧ ಪಕ್ಷದ ನಾಯಕರು ಅರಿಯರ್ಸ್ ವಿಚಾರವನ್ನು ನನ್ನ ಗಮನಕ್ಕೆ ತಂದರು. 1946ನೇ ಇಸವಿಯಿಂದ 152 ಕೋಟಿ ರೂಪಾಯಿಗಳ ಪ್ರಿನ್ಸಿಪಲ್ ಅಮೌಂಟ್ ಅರಿಯರ್ಸ್ ಇದೆ. ಅದರ ಮೇಲಿನ ಬಡ್ಡಿ 260 ಕೋಟಿ ರೂಪಾಯಿಗಳು. ಅಂದರೆ ಒಟ್ಟು 412 ಕೋಟಿ ರೂಪಾಯಿಗಳ ಅರಿಯರ್ಸ್ ಇದೆ. ಈ ಅರಿಯರ್ಸ್ ನಿನ್ನೆ, ಮೊನ್ನೆಯದಲ್ಲ, 1946ನೇ ಇಸವಿಯಿಂದ ಆಗಿರತಕ್ಕಂಥಾದ್ದು. ಇದಕ್ಕಾಗಿಯೇ ನಾನು ನನ್ನ ಆಯವ್ಯಯ ಭಾಷಣದಲ್ಲಿ ಕರಸಮಾಧಾನ ಯೋಜನೆಯನ್ನು ಸಾದರಪಡಿಸಿದೆ. ಆದರೆ ಸುಪ್ರೀಂ ಕೋರ್ಟಿನ ಒಂದು

ತೀರ್ಮಾನ ಅದಕ್ಕೆ ಅಡ್ಡಿ ತಂದಿರುವುದರಿಂದ ಈ ಕರಸಮಾಧಾನ ಯೋಜನೆಯನ್ನು ಇನ್ನೂ ಜಾರಿಗೆ ತರಲು ಆಗಿಲ್ಲ. ಅದನ್ನು ನಾವು ಲಾ ಡಿಪಾರ್ಟ್‌ಮೆಂಟ್‌ರವರ ಜೊತೆಯಲ್ಲಿ ಚರ್ಚೆ ಮಾಡಿ, ಅದನ್ನು ಸರಿಪಡಿಸಲು ಪ್ರಯತ್ನ ಮಾಡುತ್ತಿದ್ದೇವೆ. ಮಾನ್ಯ ರಾಮ್‌ದಾಸ್‌ರವರು ಮತ್ತು ಮಾನ್ಯ ವಿಶ್ವೇಶ್ವರ ಹೆಗಡೆಯವರು ಸೆಕೆಂಡ್ಸ್ ವಿಚಾರವನ್ನು ಹೇಳಿದ್ದಾರೆ. ಸೆಕೆಂಡ್ಸ್‌ಅನ್ನು ಹತ್ತಿಕ್ಕಲು ಸಾಧ್ಯವಾಗದೇ ಇದ್ದರೂ ಕೂಡ ಅದರ ಪ್ರಮಾಣವನ್ನು ಕಡಿಮೆ ಮಾಡಬೇಕಾಗಿರತಕ್ಕಂಥಾದ್ದು ಬಹಳ ಅವಶ್ಯಕವಾಗಿದೆ. ನಮ್ಮ ಮುಂದಿನ ಆಯವ್ಯಯವನ್ನು ಮಂಡಿಸತಕ್ಕ ಸಂದರ್ಭದಲ್ಲಿ ಇದರ ಬಗ್ಗೆ ವಿಶೇಷವಾದ ಗಮನವನ್ನು ಕೊಡುತ್ತೇವೆ. ಮಾನ್ಯ ಬೆಲ್ಲದ್‌ರವರು ಹೇಳಿದರು, ಚಹಾ ಅಂಗಡಿಗಳಿಗಿಂತ ಈ ಅಂಗಡಿಗಳು ಜಾಸ್ತಿಯಾಗುತ್ತಿವೆ, ಅದರಲ್ಲೂ ರಾತ್ರಿಯ ಹೊತ್ತು ಹೆಚ್ಚಾಗಿ ಕಾಣಿಸುತ್ತವೆ ಎಂದು ಹೇಳಿದರು. ಮನುಷ್ಯನ ಚಟಗಳನ್ನು ನಿಯಂತ್ರಣ ಮಾಡಲು ಬಹಳ ಕಷ್ಟವಾಗುತ್ತದೆ ಎನ್ನುವುದನಂನು ಮಾನ್ಯ ಬೆಲ್ಲದ್‌ರವರು ಒಪ್ಪುತ್ತಾರೆ ಎಂದು ನಾನು ಭಾವಿಸಿದ್ದೇನೆ.

ಶ್ರೀ ಎಸ್. ಸುರೇಶ್ ಕುಮಾರ್:— ನಿಯಂತ್ರಣ ಮಾಡದಿದ್ದರೂ ಪ್ರೋತ್ಸಾಹವನ್ನು ಕೊಡಬಾರದು.

ಶ್ರೀ ಎಸ್.ಎಂ.ಕೃಷ್ಣ:— ನಿಜ. ಆದಕ್ಕಾಗಿಯೇ, ಹಾರ್ಡ್ ಲಿಕ್ಕರ್‌ಗಿಂತ ಮಜ್ ಮೋರ್ ಡೈಲ್ಯೂಟೆಡ್ ಬೀರ್ ಅನ್ನೇ ಎನ್‌ಕರೇಜ್ ಮಾಡಿ ಎಂದು ಕೆಲವರು ನನಗೆ ಬುದ್ಧಿವಾದ ಹೇಳುತ್ತಿದ್ದಾರೆ.

ಶ್ರೀ ಎಸ್. ಸುರೇಶ್ ಕುಮಾರ್:— ನೀವು ಹೇಳುವುದಕ್ಕಿಂತ ಮುಂಚೆಯೇ ಅದನ್ನು ಕೊಡುತ್ತಿದ್ದಾರೆ. ಬೆಂಗಳೂರಿನ ಸೆಂಟ್ ಜೋಸೆಫ್ ಹೈಸ್ಕೂಲಿನ ಸುತ್ತಮುತ್ತಲೂ ಇರುವ ಪಬ್‌ಗಳವರು ಒಂದು ಜಾಹೀರಾತು ಹಾಕಿದ್ದಾರೆ. ಏನೆಂದರೆ, ಹೈಸ್ಕೂಲು ವಿದ್ಯಾರ್ಥಿಗಳಿಗೆ ಶೇಕಡ 20ರಷ್ಟು ರಿಯಾಯಿತಿ ದರದಲ್ಲಿ ಬೀರ್ ಅನ್ನು ಕೊಡುತ್ತೇವೆ ಎಂದು ಹಾಕಿದ್ದಾರೆ. They encourage in that manner.

ಶ್ರೀ ಎಸ್.ಎಂ. ಕೃಷ್ಣ:— ಮಹಾರಾಷ್ಟ್ರ ಮತ್ತು ಉತ್ತರ ಪ್ರದೇಶಗಳಲ್ಲಿ ಕೆಲವು ಸುಧಾರಣೆಗಳನ್ನು ಆಚರಣೆಗೆ ತಂದಿದ್ದಾರೆ. ಇದ್ದುದರಲ್ಲೇ ಸುಧಾರಣೆ ಮಾಡಬೇಕು. ವಯಸ್ಸಿಗೆ ಬಂದ ನಮ್ಮ ಹೆಣ್ಣುಮಕ್ಕಳು ಮತ್ತು ಗಂಡು ಮಕ್ಕಳು ಈ ಚಟಕ್ಕೆ ಬಲಿ ಬೀಳಬಾರದು ಎನ್ನತಕ್ಕಂಥಾದ್ದು ನಮ್ಮ ನಿಮ್ಮ ಉದ್ದೇಶ. ಆದರೆ ನಾವು ಬಲಿ ಬೀಳುತ್ತೇವೆಂದ ಹಠ ಮಾಡಿಕೊಂಡು ಪಬ್‌ಗಳಿಗೆ ಹೋದರೆ ಅವರಿಗೆ ಹಾರ್ಡ್ ಲಿಕ್ಕರ್‌ಗೆ ಬದಲು diluted less than 4% ಬಿಯರ್ ಅನ್ನು ಏಕೆ ಇನ್ನೂ ಹೆಚ್ಚಿಗೆ ಕೊಡಬಾರದೆಂದು ನನಗೆ ಸೂಚನೆ ಮತ್ತು ಸಲಹೆ ಬಂದಿದೆ, ಆದುದರಿಂದ ನಾನು ಇದರ ಸಲುವಾಗಿ ಎಕ್ಸೈಜ್ ಕಮೀಷನ್‌ರವರನ್ನು ಉತ್ತರ ಪ್ರದೇಶಕ್ಕೆ ಕಳುಹಿಸುತ್ತಿದ್ದೇನೆ. ಅಲ್ಲಿ ಸುಧಾರಿತ ಅಬ್ಕಾರಿ ನೀತಿ

ಜಾರಿಗೆ ಬಂದಿದೆ ಎಂದು ನನ್ನ ಗಮನಕ್ಕೆ ಬಂದಿದೆ. ಆದುದರಿಂದ ನಮ್ಮ ಅಧಿಕಾರಿಗಳು ಅಲ್ಲಿಗೆ ಹೋಗಿ ಅಧ್ಯಯನ ಮಾಡಿ ಈ ಮೂಲಕವಾದರೂ ಸ್ವಲ್ಪ ಸುಧಾರಣೆ ನಮ್ಮ ಎಳೆ ಮಕ್ಕಳಲ್ಲಿ ಬಂದರೆ ಅದರಿಂದಲೂ ಸ್ವಲ್ಪ ಅನುಕೂಲವಾಗಬಹುದೆಂದು ಭಾವಿಸುತ್ತೇನೆ. ಇದನ್ನು ತಡೆ ಹಿಡಿಯಿರಿ, ಪುನರ್ ವಿಮರ್ಶೆ ಮಾಡಿ ಎಂದು ಏನು ಹೇಳಿದ್ದೀರಿ, ಇದರ ಬಗ್ಗೆ ಇನ್ನು 5 ತಿಂಗಳಾದ ಮೇಲೆ ಪುನರ್ ವಿಮರ್ಶೆ ಮಾಡುವಂತಹ ಕಾಲ ಬರುತ್ತದೆ. ಆಗ ಸಾರಾಸಗಟಾಗಿ ಪುನರ್ ವಿಮರ್ಶೆ ಮಾಡಬಹುದು. ಆದುದರಿಂದ ಇದನ್ನು ಟೆಸ್ಟ್ ಕೇಸ್ ಆಗಿ ಮಾಡಬಹುದು. ಈ ಅಬಕಾರಿ ನಿರತ ಮಂದಿಗಳು ಯಾರಿದ್ದಾರೆ ಅವರಿಗೆ ಇದು ಟೆಸ್ಟ್ ಕೇಸ್ ಆಗುತ್ತದೆ. ಇವರು ಕನಿಷ್ಟ ಶೇಕಡ 20 ರಷ್ಟು ಹೆಚ್ಚಿಗೆ ರೆವಿನ್ಯೂ ನಮಗೆ ಕೊಡದಿದ್ದರೆ ನಾವು ಮತ್ತೆ ಈ ಎರಡನ್ನು ಬೇರೆ ಬೇರೆಯಾಗಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ. ಇನ್ನು ರೆವಿನ್ಯೂ ಅರಿಯರ್ಸ್ ಆಗಿ ಆರ್ಮಾಕ್ ರೆಂಟಲ್ಸ್ ಕೊಡದೇ ಹೋದರೆ ನಾವು ರೆವಿನ್ಯೂ ಅರಿಯರ್ಸ್ ಮಾದರಿಯಲ್ಲಿ ನಾವು ಬರಬೇಕಾದಂತಹ ಹಣವನ್ನು ವಸೂಲು ಮಾಡುತ್ತೇವೆ. ಆದರೆ ಬೇರೆ ಲಿಕ್ಕರ್‌ಗಳಿಂದ ಬರಬೇಕಾದಂತಹ ಹಣವನ್ನು ಅಡ್ವಾನ್ಸ್ ಆಗಿ ಕೊಡುತ್ತಾರೆ. ಆದುದರಿಂದ ಅಲ್ಲಿ ಅರಿಯರ್ಸ್ ಪ್ರಶ್ನೆ ಉದ್ಭವವಾಗುವುದಿಲ್ಲ. ಅವರ ಮಾಲು ಡಿಸ್ಟಿಲರಿಯಿಂದ ಹೊರಗೆ ಹೋಗುವುದಕ್ಕಿಂತ ಮುಂಚೆ ನಮಗೆ ಕೊಡಬೇಕಾದಂತಹ ಟ್ಯಾಕ್ಸ್ ಅನ್ನು ಅಡ್ವಾನ್ಸ್ ರೀತಿಯಲ್ಲಿ ಕೊಡುವುದರಿಂದ ನಮಗೆ ಬರಬೇಕಾದಂತಹ ರೆವಿನ್ಯೂ ಆಟೋಮ್ಯಾಟಿಕ್ ಆಗಿ ಬರುತ್ತದೆ. ಆ ದೃಷ್ಟಿಯಿಂದ ಇದರಲ್ಲಿ ಅರಿಯರ್ಸ್ ಎಂದು ಬರುವುದಿಲ್ಲ, ನಮಗೆ ಅರಿಯರ್ಸ್ ಬರುವಂಥಾದ್ದು ಆರ್ಮಾಕ್ ರೆಂಟಲ್ಸ್‌ನಲ್ಲಿ ಮಾತ್ರ ಎನ್ನುವಂಥಾದ್ದನ್ನು ಮಾನ್ಯ ರಾಮದಾಸ್‌ರವರ ಗಮನಕ್ಕೆ ತರಬಯಸುತ್ತೇನೆ. ಇನ್ನು ಮಾನ್ಯ ವಿಶ್ವೇಶ್ವರ ಹೆಗಡೆಯವರು ಸೆಕೆಂಡ್ಸ್ ವಿಚಾರದಲ್ಲಿ ಏನು ಪ್ರಸ್ತಾಪ ಮಾಡಿದ್ದಾರೆ, ಆದರ ಬಗ್ಗೆ ಕೊಂಚ ಸುಧಾರಣೆ ಮಾಡುವಂತಹ ಪ್ರಯತ್ನ ಮಾಡುತ್ತೇವೆ. ಇನ್ನು ಮಾನ್ಯ ಸಿಂಧ್ಯರವರು ಸಿಎಲ್-1, ಸಿಎಲ್-2, ಫೀಜ್ ಜಾಸ್ತಿಯಾಗಿದೆ ಎಂದು ಹೇಳಿದ್ದಾರೆ. ಅದನ್ನು ಕೂಡ ವಿಮರ್ಶೆ ಮಾಡಿ ಯೋಗ್ಯವಾದಂತಹ ನಿರ್ಣಯವನ್ನು ತೆಗೆದುಕೊಳ್ಳುತ್ತೇವೆ. ಇನ್ನು ಸ್ಯಾಚೆಟ್ಸ್ ಬಗ್ಗೆ ಏನು ಹೇಳಿದರು, ಇದನ್ನು ಮನೆಗಳಲ್ಲಿ ಮಿಷನ್‌ಗಳನ್ನು ಇಟ್ಟುಕೊಂಡು ಮಾಡುತ್ತಿದ್ದಾರೆಂದು ಹೇಳಿದ್ದಾರೆ. ಅಂತಹ ದೂರುಗಳು ನಮಗೆ ಬಂದರೆ ಅವರ ಮೇಲೆ ನೀವು ಕ್ರಮ ತೆಗೆದುಕೊಳ್ಳಲು ಸಾಧ್ಯವಾಗುತ್ತದೆನ್ನುವ ಭರವಸೆಯನ್ನು ಕೊಡುತ್ತೇನೆ. ಇನ್ನು ತಾವು ಈ ವಿಧೇಯಕಕ್ಕೆ ಒಪ್ಪಿಗೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ :— ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಯವರು ಮಾತನಾಡುವಂತಹ ಸಂದರ್ಭದಲ್ಲಿ ಇನ್ನು ಆರು ತಿಂಗಳುಗಳ ನಂತರ ಪುನರ್ ವಿಮರ್ಶೆ ಮಾಡುವಂತಹ ಕಾಲ ಬರುತ್ತದೆಂದ ಹೇಳಿದ್ದಾರೆ. ಇದರ ಆದಾಯ, ನಿರೀಕ್ಷೆಯ ಮಟ್ಟದಲ್ಲಿ ಬರದಿದ್ದರೆ ಪುನರ್ ವಿಮರ್ಶೆ ಮಾಡಬಹುದೆಂದು ಹೇಳಿದ್ದಾರೆ ಆದರೆ ಒಂದು ಸನ

ಇದನ್ನು ನಾವು ಅಡಾಪ್ಟ್ ಮಾಡಿದ ಮೇಲೆ ಮತ್ತೇ ಬೇರ್ಪಡಿಸಲು ಬಹಳ ಕಷ್ಟವಾಗುತ್ತದೆ. ಈ ಇಲಾಖೆಯಲ್ಲಿ ಎಷ್ಟೆಷ್ಟು ಒತ್ತಡಗಳು ಇದೆಯೆಂದು ನಿಮಗೂ ಗೊತ್ತಿದೆ.

Sri S.M. Krishna :— The whole argument is based on the simple proposition that is I don't get increased revenue of 20% and more, then I will go back. It is only an experimental measure. Whatever I have said is gone on record It is part of the proceedings. After 5 or 6 months, I am sure, you have the right to ask this is what you said on 22nd November. So, that extent I stand committed to that kind of an approach.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ :— ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಯವರು ಹೇಳಿದ್ದನ್ನು ನಾವು ಮತ್ತೆ ಕೇಳುವುದಕ್ಕೆ ಅವಕಾಶವಿದೆ, ಕೇಳೋಣ. ಆದರೆ ಇದುವರೆಗಿನ ಅನುಭವದ ಪ್ರಕಾರ ಎಕ್ಸೈಜ್ ಇಲಾಖೆಯಾಗಲಿ, ಫೈನಾನ್ಸ್ ಇಲಾಖೆಯಾಗಲಿ, ಅಥವಾ ಇತರೇ ಇಲಾಖೆಗಳ ಅನುಭವ ಎಂದರೆ ಹೀಗೆ ಮಾಡುವುದರಿಂದ ನಿಶ್ಚಿತ ಆದಾಯ ಕಡಿಮೆಯಾಗುತ್ತದೆಂಬ ಭಾವನೆಯಿಂದ ಹೇಳುತ್ತೇನೆ. ತಾವು ಈ ಬಿಲ್ ಬಹುಮತವಿದೆಯೆಂದು ಪಾಸ್ ಮಾಡಿಕೊಳ್ಳುತ್ತೀರಿ. ಆದರೆ ಹಿಂದೆ ಎಲ್ಲರ ಅನುಭವದಿಂದ ಇದನ್ನು ತಡೆ ಹಿಡಿದಿತ್ತು, ಈಗ ಇದು ಕೆಟ್ಟ ಫಲಿತಾಂಶ ಕೊಡದಿರಲಿ ಎಂದು ನಾನು ಪ್ರಾರ್ಥಿಸುತ್ತೇನೆ.

ಶ್ರೀ ಚಂದ್ರಕಾಂತ ಬೆಲ್ಲದ್ :— ಮಾನ್ಯ ಅಧ್ಯಕ್ಷರೆ, ಈಗ ಶೇಕಡ 20 ರಷ್ಟು ತೆರಿಗೆಯ ಬಗ್ಗೆ ಹೇಳಿದ್ದಾರೆ, ಅದನ್ನು ಇನ್ನು ಹೆಚ್ಚಿಗೆ ಮಾಡಬಹುದು. ಇದನ್ನು ಸರಿಯಾದ ದಾರಿಯಲ್ಲಿ ಬಂದೋಬಸ್ತ್ ಮಾಡಿದರೆ ನಮ್ಮ ಮಾನ್ಯ ಜಗದೀಶ್ ಶೆಟ್ಟರ್‌ರವರು ಹೇಳಿದ ಹಾಗೆ ಡ್ಯೂಪ್ಲಿಕೇಟ್‌ಗಳು ಬರುತ್ತಿರುವುದರಿಂದ ಆದಾಯ ಸೋರಿ ಹೋಗುತ್ತಿದೆ. ಇವುಗಳನ್ನು ತಡೆಗಟ್ಟಿದರೆ ಶೇಕಡ 20ರಷ್ಟು ಆದಾಯವಲ್ಲ, ಇನ್ನು ಹೆಚ್ಚಿಗೆ ಆದಾಯವನ್ನು ಪಡೆಯಬಹುದು. ತಾವು ಈ ಆಡಳಿತ ಯಂತ್ರದ ಮೂಲಕ ಏನು ಪ್ರಯೋಗ ಮಾಡುತ್ತಿದ್ದೀರಿ, ಅದು ಯಶಸ್ವಿಯಾಗಬೇಕೆಂಬುದು ಎಲ್ಲರ ಅಭಿಪ್ರಾಯವಾಗಿದೆ.

ಶ್ರೀ ಶಿವಾನಂದ ಎಸ್. ಪಾಟೀಲ್ :— ಮಾನ್ಯ ಅಧ್ಯಕ್ಷರೆ, ಮಾನ್ಯ ರಾಮದಾಸ್ ರವರು ಪ್ರಸ್ತಾಪ ಮಾಡಿದಂತಹ ಎಣ್ಣೆ ಇಂಡಸ್ಟ್ರಿಯ ಬಗ್ಗೆ, ಇದಕ್ಕೆ ಸಂಬಂಧಪಟ್ಟಹಾಗೆ ಮೊನ್ನೆ ಸಣ್ಣ ಕೈಗಾರಿಕೆಯ ಮಂತ್ರಿಯವರು ಉತ್ತರವನ್ನು ಕೊಟ್ಟಿದ್ದಾರೆ. ನಮ್ಮ ರಾಜ್ಯದಲ್ಲಿರುವಂತಹ ಎರಡೂವರೆ ಲಕ್ಷ ಸಣ್ಣ ಕೈಗಾರಿಕೆಗಳ ಬಗ್ಗೆ ಕೇವಲ ಐದು ಸಾವಿರ ಕೈಗಾರಿಕೆಗಳು ಬಂದ್ ಆಗಿರುವಂಥಾದ್ದನ್ನು ಹೇಳಿದ್ದಾರೆ. ಇದರಲ್ಲಿ ಆಯಿಲ್ ಟ್ಯಾಕ್ಸ್ ಸಿಸ್ಟಂ ಏನು ಇದೆ, ಅದು ಮಲ್ಟಿಪಲ್ ಟ್ಯಾಕ್ಸ್ ಎಂದು ಇದೆ, ಇದು ಮೊದಲು ಶೇಂಗಾ ಮೇಲೆ ಬೀಳುತ್ತದೆ, ನಂತರ

ಹಿಂಡಿಯ ಮೇಲೆ ಹಾಕುತ್ತಾರೆ, ಕೊನೆಗೆ ಆಯಿಲೇ ಮೇಲೂ ಪುನ: ಟ್ಯಾಕ್ಸ್ ಎಂದು ಹಾಕುತ್ತಾರೆ. ಈ ಸಿಸ್ಟಂ ಮಹಾರಾಷ್ಟ್ರದಲ್ಲಿ ಇಲ್ಲ. ಆದುದರಿಂದ ದಯಮಾಡಿ ತಾವು ಇದನ್ನು ಗಮನಿಸಬೇಕು, ಈ ಇಂಡಸ್ಟ್ರಿಗಳು ಬಂದ್ ಆಗಿದೆ, ಇವರು ತಮಗೆ ಮನವಿಯನ್ನು ಕೊಟ್ಟಿದ್ದಾರೆ. ಈ ಟ್ಯಾಕ್ಸ್ ಸಿಸ್ಟಂ ಏನಿದೆ, ಇದು ಸಿಂಗಲ್ ಪಾಯಿಂಟ್ ಟ್ಯಾಕ್ಸ್ ಆಗುವಂತಹ ವ್ಯವಸ್ಥೆಯನ್ನು ಮಾಡಿಕೊಡಿ ಎಂದು ಕೇಳಿಕೊಂಡಿದ್ದಾರೆ. ಈ ಎಕ್ಸೈಜ್ ಲಾಬಿ ದೊಡ್ಡದಿದೆ ಎಂದು ಇದರ ಬಗ್ಗೆ ಕನ್ಸಿಡರ್ ಮಾಡುವುದು ಬೇಡ. ಈ ಸ್ಮಾಲ್ ಸ್ಕೇಲ್ ಆಯಿಲ್ ಇಂಡಸ್ಟ್ರಿಗಳು ಏನಿವೆ, ಅವರ ಮನವಿ ಏನಿದೆ ಅದನ್ನು ಕನ್ಸಿಡರ್ ಮಾಡಬೇಕೆಂದು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು :— ಈಗ ಪರ್ಯಾಲೋಚನಾ ಪ್ರಸ್ತಾವವನ್ನು ಸಭೆಯ ಮತಕ್ಕೆ ಹಾಕುತ್ತೇನೆ.

ಅಧ್ಯಕ್ಷರು :— ಪ್ರಸ್ತಾವ ಏನೆಂದರೆ,

"2000ದ ಕರ್ನಾಟಕ ಮಾರಾಟ ತೆರಿಗೆ ಮತ್ತು ಅಬಕಾರಿ ಕಾನೂನುಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು.

ಖಂಡ 2 ಮತ್ತು 3

ಅಧ್ಯಕ್ಷರು :— "ಖಂಡ 2 ಮತ್ತು 3 ಈ ವಿಧೇಯಕದ ಅಂಗವಾಗಿರುತ್ತದೆ."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ಮತ್ತು 3 ಅನ್ನು ವಿಧೇಯಕಕ್ಕೆ ಸೇರಿಸಲಾಯಿತು)

ಖಂಡ 1 ಇತ್ಯಾದಿ

ಅಧ್ಯಕ್ಷರು :— ಪ್ರಸ್ತಾವ ಏನೆಂದರೆ,

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವ ಅಂಗೀಕಾರ

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿ) :— ಮಾನ್ಯ ಅಧ್ಯಕ್ಷರೆ, 2000ದ ಕರ್ನಾಟಕ ಮಾರಾಟ ತೆರಿಗೆ ಮತ್ತು ಅಬಕಾರಿ ಕಾನೂನುಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು :— ಪ್ರಸ್ತಾವ ಏನೆಂದರೆ,

``2000ದ ಕರ್ನಾಟಕ ಮಾರಾಟ ತೆರಿಗೆ ಮತ್ತು ಅಬಕಾರಿ ಕಾನೂನುಗಳ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು''

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

ಅಧ್ಯಕ್ಷರು :— ಮಾನ್ಯ ಚಂದ್ರೇಗೌಡರೇ, ಕರ್ನಾಟಕ ಗ್ರಾಮೀಣ ಅಭ್ಯರ್ಥಿಗಳಿಗಾಗಿ (ರಾಜ್ಯ ಸಿವಿಲ್ ಸೇವೆಗಳಲ್ಲಿ) ನೇಮಕಾತಿಗಳ ಅಥವಾ ಹುದ್ದೆಗಳ ಮೀಸಲಾತಿ ವಿಧೇಯಕ 2000 ಇದರ ಪರ್ಯಾಲೋಚನಾ ಪ್ರಸ್ತಾವವನ್ನು ಮಂಡಿಸಬೇಕು.

(2) ಕರ್ನಾಟಕ ಗ್ರಾಮೀಣ ಅಭ್ಯರ್ಥಿಗಳಿಗಾಗಿ (ರಾಜ್ಯ ಸಿವಿಲ್ ಸೇವೆಗಳಲ್ಲಿ) ನೇಮಕಾತಿಗಳ ಅಥವಾ ಹುದ್ದೆಗಳ ಮೀಸಲಾತಿ ವಿಧೇಯಕ 2000

ಪರ್ಯಾಲೋಚನಾ ಪ್ರಸ್ತಾವ

+ ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರ ಮಂತ್ರಿಗಳು) :— ಮಾನ್ಯ ಅಧ್ಯಕ್ಷರೆ, 2000 ಕರ್ನಾಟಕ ಗ್ರಾಮೀಣ ಅಭ್ಯರ್ಥಿಗಳಿಗಾಗಿ (ರಾಜ್ಯ ಸಿವಿಲ್ ಸೇವೆಗಳಲ್ಲಿ) ನೇಮಕಾತಿಗಳ ಅಥವಾ ಹುದ್ದೆಗಳ ಮೀಸಲಾತಿ ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

ಅಧ್ಯಕ್ಷರು :— ಇವತ್ತು ನಡೆದಂತಹ ಬಿ.ಎ.ಸಿ ಮೀಟಿಂಗ್‌ನಲ್ಲಿ ಈ ಬಿಲ್‌ನ ಚರ್ಚೆಗೆ ಎಂದು ಎರಡು ಗಂಟೆಗಳ ಕಾಲಾವಧಿಯನ್ನು ನಿಗದಿ ಮಾಡಲಾಗಿದೆ.

ಶ್ರೀ ಬಿ. ಸೋಮಶೇಖರ್ :— ನಾನು ತಮಗೆ ಒಂದು ಸಲಹೆಯನ್ನು ಕೊಡುತ್ತೇನೆ, ತಾವು ಈಗ ತಂದಿರುವ ಪ್ರಪೋಸಲ್‌ಗೆ ಈ ಬಿಲ್ ಅವಶ್ಯಕತೆ ಇರುವುದಿಲ್ಲ. ನಾವು ಇಷ್ಟೊಂದು ಸರ್ಕಸ್ ಮಾಡುವ ಅವಶ್ಯಕತೆ ಇಲ್ಲ. ತಾವು ಕೇಳುವುದಾದರೆ ನಾನು ಎರಡು ನಿಮಿಷದಲ್ಲಿ ಹೇಳುತ್ತೇನೆ, ತಾವು ರೂಲ್ಸ್‌ಗೆ ಅಮೆಂಡ್‌ಮೆಂಟ್ ತರುತ್ತಿದ್ದೀರಿ.